
ಮೋಹನ ತರಂಗ

ನೀಳ್ಗವನ : ಬೀರೂರು ಶ್ರೀ ಚಿದಂಬರ ಜೋಯಿಸರು



ನನ್ನ ಜೀವನವೇ ನನ್ನ ಸಂದೇಶ

ಕರ್ನಾಟಕ ಗಾಂಧೀ ಸ್ಮಾರಕ ನಿಧಿ (ರಿ.)
ಗಾಂಧೀ ಸ್ಮಾರಕನಿಧಿ (ರಿ.), ಗಾಂಧೀ ಭವನ,
ಕುಮಾರಪಾರ್ಕ್ ರಸ್ತೆ, ಬೆಂಗಳೂರು - 560 001.

ಮೋಹನ ತರಂಗ

Mohana Taranga - A Poem on Mahatma Gandhi
by Beruru Sri Chidambara Jois.
Published by: Karnataka Gandhi Smaraka Nidhi ®
Gandhi Smaraka Nidhi ®, Gandhi Bhavan,
Kumarapark Road, Bangalore - 560 001.

Pp :

ಪ್ರಥಮ ಮುದ್ರಣ : ಅಕ್ಟೋಬರ್ 2, 2011

ಪ್ರತಿಗಳು : 1000

ಬೆಲೆ : ರೂ.40.00

ಮುದ್ರಣ : ಓ.ಎಸ್. ಪ್ರಿಂಟ್ಸ್
ಬೆಂಗಳೂರು-10.
ದೂ: 98453 20921

ಶ್ರೀ

॥ ಮೋಹನ ತರಂಗ ॥

ಶಾರದಾಂಬೆಯ ಪಾದಪಾಥೋಜಗಳಿಗೆರಗಿ
ಭಾರತಾಂಬೆಯ ಹೃದಯ ಪೀಠದಲ್ಲಿರಿಸಿ
ಹೇರಂಬನಂ ಮೊದಲೆ ಭಕ್ತಿಯಿಂ ಜಾನಿಸುತೆ
ಆರಂಭಿಸುವೆನಿಂದು ಗಾಂಧಿ ಚರಿತೆಯನು ॥1॥

ಗಾಂಧೀಜಿಯೆನ್ನುವರು ಬಾಪುಯೆಂಬರ್ ಕೆಲರ್
ಗಾಂಧಿತಾತನು ತಾನು ಮುದ್ದು ಮಕ್ಕಳಿಗೆ
ನಾಂದಿಯನು ಹಾಡಿದರು ಸತ್ಯ ಶೋಧನೆಗಂದು
ತಂದೆಯಾದರು ಇಂದು ಸ್ವಾತಂತ್ರ್ಯಯುಗಕೆ ॥2॥

ಧರ್ಮವೆಂಬುದಕದಕೆ ನೀತಿಯೇ ಜೀವಾಳ
ಕರ್ಮಯೋಗವೆ ಅದರ ಬಹಿರಂಗದೊಡಲು
ಮರ್ಮವದು ಸತ್ಯತಾ ಸತ್ಯರೂಪನು ಶಿವನು
ಕರ್ಮದಲಿ ಸತ್ಯವನು ಬೆರಸಿದರು ಗಾಂಧಿ ॥3॥

ಎನಗೆ ಕುಟಿಲತೆಯಲ್ಲಿ ಸಾಟಿಯಾದವರಿಲ್ಲ
ಎನ್ನಂತೆ ಖಲನಿಲ್ಲ ಕಾಮಿ ಯಿಲ್ಲ
ಮನವರಿಕೆಯಾಗಿರಲು ಶಿವನೆ ಪಿತನೆಂಬುದದು
ತನುವಿತ್ತ ದೇವನಂ ನೆನೆಯದ ಕೃತಘ್ನ ॥4॥



'ಮೋಹನ ತರಂಗ' ವಾಚನ-ವ್ಯಾಖ್ಯಾನ

(ಎಡದಿಂದ ಬಲಕ್ಕೆ) ಬೀರೂರು ಚಿದಂಬರ ಜೋಯಿಸರು, ಮತ್ತೂರು ಕೃಷ್ಣಮೂರ್ತಿ, ಹೊಸಹಳ್ಳಿ ರಾಮಶಾಸ್ತ್ರೀ,
ಸೌ॥ ವೇದಾ ಬಾಲಸುಬ್ರಹ್ಮಣ್ಯ ಮತ್ತು ಕುಮಾರಿ ಆರ್. ಪದ್ಮ

ಪ್ರಕಾಶಕರ ನುಡಿ

ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯ, ತೊರವೆ ರಾಮಾಯಣ ಮೊದಲಾದ ಕನ್ನಡ ಕಾವ್ಯಗಳನ್ನು 6-7 ದಶಕಗಳಿಗೆ ಮುನ್ನ ನಮ್ಮ ಕರ್ನಾಟಕ ರಾಜ್ಯದ ವಿವಿಧ ಕಡೆಗಳಲ್ಲಿ ವಾಚನ ಮಾಡುವುದು ಮಾತ್ರ ರೂಢಿಯಲ್ಲಿ ಇದ್ದಿತು. 6-7 ದಶಕಗಳಿಂದ ಈಚೆಗೆ ಕಾವ್ಯ ವಾಚನಗಳಿಗೆ ಅರ್ಥ ಹೇಳುವುದು, ಅನಂತರ ವಾಚನಕ್ಕೆ ವ್ಯಾಖ್ಯಾನ ಮಾಡುವುದೂ ರೂಢಿಗೆ ಬಂದಿತು.

1960-62ರಿಂದ ಈ ಕಾವ್ಯಗಳಿಗೆ - ಮುಖ್ಯವಾಗಿ ಕುಮಾರವ್ಯಾಸ ಭಾರತಕ್ಕೆ - ವಾಚನ-ವ್ಯಾಖ್ಯಾನವು ರಾಜ್ಯದಾದ್ಯಂತ ನಡೆಯಲು ಆರಂಭಿಸಿತು. ಹಲವರು ವಾಚನಕಾರರು, ಮತ್ತು ವ್ಯಾಖ್ಯಾನಕಾರರು ಈ ದಿಸೆಯಲ್ಲಿ ಬಹಳ ಸೇವೆ ಮಾಡಿದ್ದಾರೆ. ಈ ವಾಚನ-ವ್ಯಾಖ್ಯಾನ ಪದ್ಧತಿಯಿಂದ ಕಾರ್ಯಕ್ರಮಗಳಿಗೆ ಹೆಚ್ಚು ಹೆಚ್ಚು ಶ್ರೋತೃಗಳು ಬರಲಾರಂಭಿಸಿದರು. ಇದೇ ಸಮಯ ಸರಕಾರವು ಗಮಕಕಲಾ ಪರಿಷತ್ತನ್ನು ರೂಪಿಸಿ ಗಮಕವಾಚನ-ವ್ಯಾಖ್ಯಾನಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟಿತು. ಶ್ರೀಮಾನ್ ಜಿ. ನಾರಾಯಣರ ಅಧ್ಯಕ್ಷತೆಯಲ್ಲಿ ಈ ಕಲೆಯು ಹೆಸರುವಾಸಿ ಆಯಿತು.

1968-69ರಲ್ಲಿ, ಮಹಾತ್ಮಾಗ್ರಾಂಧಿಯವರ ಜನ್ಮ ಶತಮಾನೋತ್ಸವವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಬೇಕು ಎಂದು ಸರಕಾರ ಮತ್ತು ಗಾಂಧೀ ಸ್ಮಾರಕ ನಿಧಿಯವರು ಯೋಜಿಸಿದರು.

ಸರ್ವಶ್ರೀ ನಿಜಲಿಂಗಪ್ಪನವರು, ರಾಮಕೃಷ್ಣ ಹೆಗ್ಗಡೆಯವರು, ವೀರೇಂದ್ರ ಪಾಟೀಲ್‌ರು, ಸಿದ್ಧವನಹಳ್ಳಿ ಕೃಷ್ಣಶರ್ಮರು, ಸಂಪದ್ಗಿರಿ ರಾಯರು, ಜಿ. ನಾರಾಯಣರು, ಶಿಕ್ಷಣಸಚಿವರಾಗಿದ್ದ ಕೆ.ವಿ. ಶಂಕರಗೌಡರು ಮೊದಲಾದವರು ಸೇರಿ ಒಂದು ಸಮಿತಿಯನ್ನು ರಚಿಸಿದರು. ಕನ್ನಡ ಸಂಸ್ಕೃತಿ ಇಲಾಖೆಯ ಪರವಾಗಿ ಶ್ರೀಮಾನ್ ಜೆ.ಎಂ.ಟಿ. ರಾಜನ್ ಅವರು, ಅನೇಕ ಸಾಂಸ್ಕೃತಿಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಏರ್ಪಡಿಸಿದರು. 'ಕುಮಾರವ್ಯಾಸ ಭಾರತ, ಜೈಮಿನಿ ಭಾರತದ ಧಾಟಿಯಲ್ಲಿ ಮಹಾತ್ಮಾ ಗಾಂಧಿಯವರ ಜೀವನ ಸಾಧನೆ ಬಗೆಗೆ ಕಾವ್ಯ ರಚಿಸಬಾರದು ಏಕೆ?' ಎಂದು ವ್ಯಾಖ್ಯಾನಕಾರರಾಗಿ ಹೆಸರುವಾಸಿಯಾಗಿದ್ದ ಶ್ರೀ ಮತ್ತೂರು ಕೃಷ್ಣಮೂರ್ತಿಯವರನ್ನು ಕೇಳಲಾಯಿತು. ಇವರ ಸೂಚನೆ ಮೇರೆಗೆ ಪ್ರಸಿದ್ಧ ಸಂಸ್ಕೃತ ಮತ್ತು ಕನ್ನಡ ಭಾಷೆಯ ವಿದ್ವಾಂಸರೂ, ಕವಿಗಳೂ ಆಗಿದ್ದ ಶ್ರೀಮಾನ್ ಬೀರೂರು ಚಿದಂಬರ ಜೋಯಿಸರಿಗೆ ಈ ಕಾರ್ಯವನ್ನು ವಹಿಸಲಾಯಿತು.

1968 ಅಕ್ಟೋಬರ್ ಮೊದಲವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಮಾನ್ಯ ಚಿದಂಬರ ಜೋಯಿಸರು ರಚಿಸಿ ಸಿದ್ಧಪಡಿಸಿದ 'ಮೋಹನ ತರಂಗ' ಕಾವ್ಯದ ವಾಚನವ್ಯಾಖ್ಯಾನವನ್ನು ಶ್ರೀ ಹೊಸಹಳ್ಳಿ ರಾಮಶಾಸ್ತ್ರೀ ಮತ್ತು ಶ್ರೀ ಮತ್ತೂರು ಕೃಷ್ಣಮೂರ್ತಿಯವರು ನಡೆಸಿಕೊಟ್ಟರು. ಶ್ರೋತೃಗಳ ಅಪಾರ ಮೆಚ್ಚಿಗೆಗೆ ಪಾತ್ರವಾದ ಗಾಂಧೀಜಿ ಬಗೆಗಿನ ಈ ವಾಚನ ವ್ಯಾಖ್ಯಾನ ಕಾರ್ಯಕ್ರಮವನ್ನು ಈ ಇಬ್ಬರು ಕಲಾವಿದರೂ ಒಂದು ವರ್ಷಕಾಲ (1968-69) ರಾಜ್ಯದಾದ್ಯಂತ ಪ್ರವಾಸಮಾಡಿ ನಡೆಸಿಕೊಟ್ಟರು. ಅತ್ಯಂತ ಜನಪ್ರಿಯವಾದ ಈ ಕಾವ್ಯ 'ಮೋಹನತರಂಗ'ವನ್ನು ಪುಸ್ತಕ ರೂಪದಲ್ಲಿ ತರಬೇಕು, ಜತೆಗೆ ಸಿ.ಡಿ. ಡಿ.ವಿ.ಡಿ ರೂಪದಲ್ಲಿಯೂ ಇದನ್ನು ಹೊರತರಬೇಕು ಎಂದು ತೀರ್ಮಾನಿಸಲಾಯಿತು. ಈ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ ನೆರವಾದ, ಭಾರತೀಯ

ಪ್ರಕಾಶಕರ ನುಡಿ

ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯ, ತೊರವೆ ರಾಮಾಯಣ ಮೊದಲಾದ ಕನ್ನಡ ಕಾವ್ಯಗಳನ್ನು 6-7 ದಶಕಗಳಿಗೆ ಮುನ್ನ ನಮ್ಮ ಕರ್ನಾಟಕ ರಾಜ್ಯದ ವಿವಿಧ ಕಡೆಗಳಲ್ಲಿ ವಾಚನ ಮಾಡುವುದು ಮಾತ್ರ ರೂಢಿಯಲ್ಲಿ ಇದ್ದಿತು. 6-7 ದಶಕಗಳಿಂದ ಈಚೆಗೆ ಕಾವ್ಯ ವಾಚನಗಳಿಗೆ ಅರ್ಥ ಹೇಳುವುದು, ಅನಂತರ ವಾಚನಕ್ಕೆ ವ್ಯಾಖ್ಯಾನ ಮಾಡುವುದೂ ರೂಢಿಗೆ ಬಂದಿತು.

1960-62ರಿಂದ ಈ ಕಾವ್ಯಗಳಿಗೆ - ಮುಖ್ಯವಾಗಿ ಕುಮಾರವ್ಯಾಸ ಭಾರತಕ್ಕೆ - ವಾಚನ-ವ್ಯಾಖ್ಯಾನವು ರಾಜ್ಯದಾದ್ಯಂತ ನಡೆಯಲು ಆರಂಭಿಸಿತು. ಹಲವರು ವಾಚನಕಾರರು, ಮತ್ತು ವ್ಯಾಖ್ಯಾನಕಾರರು ಈ ದಿಸೆಯಲ್ಲಿ ಬಹಳ ಸೇವೆ ಮಾಡಿದ್ದಾರೆ. ಈ ವಾಚನ-ವ್ಯಾಖ್ಯಾನ ಪದ್ಧತಿಯಿಂದ ಕಾರ್ಯಕ್ರಮಗಳಿಗೆ ಹೆಚ್ಚು ಹೆಚ್ಚು ಶ್ರೋತೃಗಳು ಬರಲಾರಂಭಿಸಿದರು. ಇದೇ ಸಮಯ ಸರಕಾರವು ಗಮಕಕಲಾ ಪರಿಷತ್ತನ್ನು ರೂಪಿಸಿ ಗಮಕವಾಚನ-ವ್ಯಾಖ್ಯಾನಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟಿತು. ಶ್ರೀಮಾನ್ ಜಿ. ನಾರಾಯಣರ ಅಧ್ಯಕ್ಷತೆಯಲ್ಲಿ ಈ ಕಲೆಯು ಹೆಸರುವಾಸಿ ಆಯಿತು.

1968-69ರಲ್ಲಿ, ಮಹಾತ್ಮಾಗಾಂಧಿಯವರ ಜನ್ಮ ಶತಮಾನೋತ್ಸವವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಬೇಕು ಎಂದು ಸರಕಾರ ಮತ್ತು ಗಾಂಧೀ ಸ್ಮಾರಕ ನಿಧಿಯವರು ಯೋಜಿಸಿದರು.

ವಿದ್ಯಾಭವನದ ಬೆಂಗಳೂರು ಕೇಂದ್ರದ ನಿರ್ದೇಶಕ, ಪದ್ಮಶ್ರೀ ಪುರಸ್ಕೃತ ಡಾ. ಮತ್ತೂರು ಕೃಷ್ಣಮೂರ್ತಿಯವರಿಗೆ ಕೃತಜ್ಞರಾಗಿದ್ದೇವೆ. ಇದರ ಮೊದಲಹೆಜ್ಜೆಯಾಗಿ ಇಂದು 'ಮೋಹನ ತರಂಗ' ಕಾವ್ಯವನ್ನು ಗಾಂಧೀ ಗ್ರಂಥಮಾಲೆಗೆ ಸೇರಿಸಿ ಸಾರ್ವಜನಿಕರಿಗೆ ಒಪ್ಪಿಸುತ್ತಿದ್ದೇವೆ. ಇದನ್ನು ನಾಡಿನ ಜನ ಸ್ವಾಗತಿಸುತ್ತಾರೆ ಎಂದು ನಂಬಿದ್ದೇವೆ.

'ಮೋಹನ ತರಂಗ' - ಇದು ಬೀರೂರು ಚಿದಂಬರ ಜೋಯಿಸರು ರಚಿಸಿರುವ ಗಾಂಧೀಜಿಯ ಜೀವನ, ಸಾಧನೆಯ ಬಗೆಗಿನ ಕೃತಿ. ಇದನ್ನು ಪ್ರಕಟಿಸಬೇಕೆಂದು ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರೂ, ಗಾಂಧೀವಾದಿಗಳೂ ಆದ ಡಾ. ಹೊ. ಶ್ರೀನಿವಾಸಯ್ಯನವರು ಅನೇಕ ವರ್ಷಗಳಿಂದ ಬಯಸಿದ್ದರು. ಅವರ ಈ ಸಂಕಲ್ಪವು ನೆರವೇರುವಂತೆ ಮಾಡಿದ, ಭಾರತೀಯ ವಿದ್ಯಾಭವನದ ನಿರ್ದೇಶಕ ಡಾ. ಮತ್ತೂರು ಕೃಷ್ಣಮೂರ್ತಿಯವರಿಗೆ ನಾವೆಲ್ಲ. ಕೃತಜ್ಞರಾಗಿದ್ದೇವೆ.

ಈ ಕೃತಿಯನ್ನು ಮುದ್ರಿಸಿ ಪ್ರಕಟಿಸಲು ಅನುಮತಿ ಇತ್ತ ವಿದ್ವಾನ್ ಚಿದಂಬರ ಜೋಯಿಸರ ಹಿರಿಯ ಪುತ್ರ ಶ್ರೀ ಪೀತಾಂಬರ ಜೋಯಿಸರು ಹಾಗೂ ಕುಟುಂಬವರ್ಗಕ್ಕೆ ನಾವೆಲ್ಲ ಆಭಾರಿಗಳಾಗಿದ್ದೇವೆ.

- ಎಚ್.ಆರ್. ದಾಸೇಗೌಡ

ಕಾರ್ಯದರ್ಶಿ

ಕರ್ನಾಟಕ ಗಾಂಧೀಸ್ಮಾರಕ ನಿಧಿ

ಮೋಹನ ತರಂಗ

ಶ್ರೀ

॥ ಮೋಹನ ತರಂಗ ॥

ಶಾರದಾಂಬೆಯ ಪಾದಪಾಥೋಜಗಳಿಗೆರಗಿ
ಭಾರತಾಂಬೆಯ ಹೃದಯ ಪೀಠದಲ್ಲಿರಿಸಿ
ಹೇರಂಬನಂ ಮೊದಲೆ ಭಕ್ತಿಯಿಂ ಜಾನಿಸುತೆ
ಆರಂಭಿಸುವೆನಿಂದು ಗಾಂಧಿ ಚರಿತೆಯನು ॥1॥

ಗಾಂಧೀಜಿಯೆನ್ನುವರು ಬಾಪುಯೆಂಬರ್ ಕೆಲರ್
ಗಾಂಧಿತಾತನು ತಾನು ಮುದ್ದು ಮಕ್ಕಳಿಗೆ
ನಾಂದಿಯನು ಹಾಡಿದರು ಸತ್ಯ ಶೋಧನೆಗಂದು
ತಂದೆಯಾದರು ಇಂದು ಸ್ವಾತಂತ್ರ್ಯಯುಗಕೆ ॥2॥

ಧರ್ಮವೆಂಬುದಕದಕೆ ನೀತಿಯೇ ಜೀವಾಳ
ಕರ್ಮಯೋಗವೆ ಅದರ ಬಹಿರಂಗದೊಡಲು
ಮರ್ಮವದು ಸತ್ಯತಾ ಸತ್ಯರೂಪನು ಶಿವನು
ಕರ್ಮದಲಿ ಸತ್ಯವನು ಬೆರಸಿದರು ಗಾಂಧಿ ॥3॥

ಎನಗೆ ಕುಟಿಲತೆಯಲ್ಲಿ ಸಾಟಿಯಾದವರಿಲ್ಲ
ಎನ್ನಂತೆ ಖಲನಿಲ್ಲ ಕಾಮಿ ಯಿಲ್ಲ
ಮನವರಿಕೆಯಾಗಿರಲು ಶಿವನೆ ಪಿತನೆಂಬುದದು
ತನುವಿತ್ತ ದೇವನಂ ನೆನೆಯದ ಕೃತಘ್ನ ॥4॥

ಎಂದು ಚಿಂತಿಸುತಾತ್ಮಶೋಧನೆಗೆ ತೊಡಗಿದರು
ಕುಂದುಗಳ ಬಚ್ಚಿಡದೆ ಹೃದಯ ತೆರೆದು
ಇಂದು ಕನ್ನಡಿಸುವೆನು ಸತ್ಯಶೋಧನೆಯದನು
ಚೆಂದವದು ಸತ್ಯವೆಂಬುದದೆ, ಸತ್ಯ ನಿತ್ಯ ||5||

ತುಂಗೆ ಗೆಡಬಲದಲ್ಲಿ ಹೊಸಹಳ್ಳಿ ಮತ್ತೂರು
ಸಂಕೇತಿ ಜನದೆರಡು ಕಂಗಳೆಂಬಂತೆ
ಕಂಗೊಳಿಪುವಲ್ಲಿಹರು ಕೃಷ್ಣನೆನೆ ಮತ್ತೂರ
ಕಂಠದಿಂ ಗಿಣಿ - ರಾಮ ಶಾಸ್ತ್ರಿ ಹೊಸಹಳ್ಳಿ ||6||

ವಾಚನ ವ್ಯಾಖ್ಯಾನದಲಿ ಚಿತ್ತ ತೊಡಗಿರಲು
ವಾಚನಕ್ಕನುಗುಣದ ಗಾಂಧಿಚರಿತೆಯನು
ವಾಚಿಸಲ್ಬಯಸಿ ತಾವೀರ್ವರುಂ ಸೂಚಿಸಲು
ಬೀ-ಚಿದಂಬರ ನಾನು ಬರೆಯ ತೊಡಗಿಹೆನು ||7||

ಇದುವರೆಗು ಮತ್ತಾರು ಮೀ ಕೃತಿಗೆ ತೊಡಗಿಲ್ಲ
ವದುವೆ ಕೈ ಹಾಕಿರುವೆ ಸಾಹಸಕೆ ನಾನು
ಇದುವೆ ಗಾಂಧಿ ಮಹಾತ್ಮನೀ ಶತಾಬ್ದಿಯನೆನಹು
ಕಾದಯಾಸಾಗರಗೆ ಶ್ರದ್ಧೆಯಂಜಲಿಯು ||8||

ಸರಳತೆಯು ಶೈಲಿಯಲಿ ಪದಗಳಲಿ ಮೈತ್ರಿಯದು
ಬರೆವ ವೇಗದ ಜೊತೆಗೆ ತಿದ್ದದಿಹ ಚೆಲುವು
ನೆರೆದ ಜನ ಮೆಚ್ಚುವಂದದದ ಬಲುಹು ಕಾವ್ಯದೊಳು
ಶಾರದೆಯ ಕೃಪೆಯಲ್ತೆ ಬೇರೆಯೇನಿಹುದು ||9||

ಹಿರಿಯರೆಲ್ಲರ ಹರಕೆ ಬಂಧುಗಳ ಬಲು ಮಮತೆ
ಪರಮ ಪೂಜ್ಯಳದೆನ್ನ ತಾಯಿಯೊಲವು
ಕರುಣಾಳು ಕೇಶವನ ಕಾರುಣ್ಯ ದೃಷ್ಟಿಯಿರೆ
ಬರೆಸಲೀ ಕೃತಿಯ ತಾ ವೆಂಕಟೇಶ್ವರನು ||10||

ಕವಿಯೆಂಬ ಗರುವಿಲ್ಲ ಜಾಣ್ಮೆಯಾ ಮದವಿಲ್ಲ
ತಿಳಿದುದನು ಬರೆಯಲ್ಕೆ ಬೇಸರವೆ ಇಲ್ಲ
ಬರೆವವಂ ನಾನಲ್ಲ ಬಲ್ಲೆ ಗಾಂಧಿಯ ನೆಲ್ಲ
ಕೇಳ್ದ ಜನ ಮೆಚ್ಚಿದೊಡೆ ಸಾಕು ನನಗೆಲ್ಲ ||11||

ಪ್ರಶ್ನೆಗುತ್ತರ ಬರೆವ ವಿದ್ಯಾರ್ಥಿಯಂದದಲಿ
ಕೃಷ್ಣ ಕೇಳಲು ನಾನು ಬರೆಯ ತೊಡಗಿಹೆನು
ಪ್ರಶ್ನೆ ಗುತ್ತರ ವೀಯ ಲಲ್ಪ ಕಾಲವು ಗಡಿಯು
ಕೃಷ್ಣನೇ ತಾನಿದನು ಬರೆಸಬೇಕು ||12||

ಗಾಂಧಿಯೆನ್ನುವ ಹೆಸರ ಕೇಳದವರಿನ್ನಿಲ್ಲ
ಗಾಂಧಿಯೆಂಬುದದೊಂದು ಮನೆತನದ ಹೆಸರು
ಗಾಂಧಿ ವಂಶಜರೆಲ್ಲ ಬನಿಯ ಜಾತಿಯ ಜನರು
ಚಿಲ್ಲರೆಯ ಅಂಗಡಿಯ ಶೆಟ್ಟರವರು ||13||

ನುಡಿಯ ರನೃತವನೆಂದು ನ್ಯಾಯದಿಂ ನಿಷ್ಠುರರು
ದಯೆಯ ಮೂರ್ತಿಗಳಂತೆ ದೀನ ಮನುಜರೊಳು
ತಮ್ಮ ದುಡಿಮೆಯ ಮೇಲೆ ನಿಂತು ಜೀವಿಸುವವರು
ಸಿರಿಯ ಸೆರೆಯಾಳಾಗಿ ಬಾಳದವರು ||14||

ಇಂತು ವಿಖ್ಯಾತವಹ ಗಾಂಧಿವಂಶದೊಳಂದು
ಪಾಲ್ಗಡಲೊಳಿಂದುವಿನ ಮಾಳ್ಕೆಯಿಂದೆ
ಜನಿಸಿದರು ನಿಜಗುಣದಿನುತ್ತಮೋತ್ತಮಚಂದ
ಗಾಂಧಿಯೋತಾಗಾಂಧಿ, ಗಾಂಧಿಯಜ್ಜ ||15||

ಮನದೊಳಿರ್ದುದ ನುಡಿವರ್ನುಡಿದಂತೆ ನಡೆಯುವರ್
ತಮ್ಮ ಗುಣ ಗಣದಿಂದೆ ಖ್ಯಾತಿ ವೆತ್ತವರು
ಪೋರ ಬಂದರದಲ್ಲಿ ಮಂತ್ರಿ ಪದವಿಯ ಪಡೆದು
ದುಡಿದರಾ ಸಂಸ್ಥಾನ ದೇಳ್ಗೆಗಾಗಿ ||16||

ಪಿಸುಣಜನ ಬಾಧೆಯಿಂ ದತ್ತಣಿಂ ಹೊರವಂಟ
ರಾ ಜುನಾಘಡದಲ್ಲಿ ಪಡೆಯಲಾಶ್ರಯವಂ
ಸಂತಸದಿ ಜೀವಿಸುವ ಸಜ್ಜನಕೆ ಪಿಸುಣಜನ-
ರವ್ಯಾಜ ವೈರಿಗಳು ಜಗದಿ ಸೋಜಿಗವು ॥17॥

ಬಂದರ್ ಜುನಾಘಡಕೆ ನಿಂದರ್
ನವಾಬನಿದಿರೆಂದರ್ ಜಯನೃಪತಿಯೆಂದು
ಕಂಡರ್ ಮಹಾಸಭೆಯ ನುಂಡರ್
ಸುಖಾಮೃತವ ಮಿಂದರ್ ಸುಖಾಶ್ರುಜಲದೊಳ್
ಆಗಲ್ ನವಾಬನಿಗೆ ಮಾಡಲ್
ಸಲಾಮನೆಡಗೈಯೆತ್ತಲದನು
ಕಂಡು ಕೇಳಲ್ ಇದೇನೆನುತಲಾಗಳ್
ಬಲಂ ಪೋರಬಂದರ್‌ಗೆ ಸೇರಿತ್ತು ಯೆಂದರ್ ॥18॥

ಕಂಡು ಧೈರ್ಯವನಿವರ ಮೆಚ್ಚುತೆ ಗುಣವ ಬಯಸಿ ನವಾಬನು
ಖಂಡಿಸದೆ ತಾ ಮಂತ್ರಿಪದವಿಯನಿತ್ತನುತ್ತಮ ಚಂದಗೆ
ಖಂಡಿತದ ನುಡಿ ರೂಕ್ಷವಾಗಿಯೆ ತೋರಿದರು ತಾ ಸತ್ಯವು
ಮಂಡನವೆ ತಾ ಸತ್ಯ ಶೀಲಂ ಗಾದುದೋತಾಗಾಂಧಿಗೆ ॥19॥

ಪಡೆದು ಗಾರ್ಹಸ್ಥ್ಯವನು ಸುಖಿಸಿ ಸತಿಯೊಡನೆ
ಪಡೆದರೀರೆರಡು ಮಕ್ಕಳ ಗಾಂಧಿ ತಾತ
ಮೃಡನ ಸನ್ನಿಧಿ ಸೇರಲಾ ಸತಿಯು ಧೈರ್ಯಮಂ
ಬಿಡದೆ ಮತ್ತೋರ್ವಳನು ಗೃಹಿಣಿಯೆನಿಸಿದರು ॥20॥

ಆ ಸತಿಯೊಳುದಿಸಿದರು ಮೂಡಲೊಳ್ ರವಿಚಂದ್ರ
ರಂದದಲಿ ಕಂಗೊಳಿಪ ವಂಶದೀಪಗಳು
ಅವರೊಳಗೆ ಮೊದಲಿಗರು ಕರ್ಮಚಂದರು ಗಾಂಧಿ
ಯಿವರನೆಲ್ಲರು ಕಬಾ ಗಾಂಧಿಯೆನ್ನುವರು ||21||

ಇವರಲಾ ಗಾಂಧೀಜಿಯವತಾರಕಾಶ್ರಯರು
ಅವರ ಬಳಿಕಾ ತುಲಸಿ ದಾಸ ಗಾಂಧಿ
ಆರು ಜನ ಸೋದರರರು ಷಣ್ಮುಖನ ಮುಖದಂತೆ
ಬೇರೆಯವರೆನಿಸದೇ ಬಾಳಿದರು ಸುಖದಿ ||22||

ಕರ್ತವ್ಯ ಕರ್ಮದಲಿ ಬಹು ನಿಷ್ಠೆಯುಳ್ಳವನು
ಚಂದ್ರನಂದದಿ ವಂಶವನು ಬೆಳಗಿದವನು
ಅದುವೆ ಪೆಸರಾಯ್ತವಗೆ ಕರ್ಮಚಂದನು ಎಂದು
ಅನ್ವರ್ಥ ನಾಮವದು ಗಾಂಧಿ ತಾತನಿಗೆ ||23||

ಸತ್ಯದೊಳು ಅನುರಾಗ ದೀನರೊಳು ಔದಾರ್ಯ
ಸಾಹಸದ ಕಾರ್ಯದೊಳು ಶೌರ್ಯಮೆರೆಯೆ
ಪೋರಬಂದರದಲ್ಲಿ ಮಂತ್ರಿಯಾದರುಯಿವರು
ಗುಣವಿರಲು ಪದವಿಯೇ ಹುಡುಕಿ ಬಂದಪುದು ||24||

ಮಮತೆಯಿಂ ಪರಿಜನರ ಪ್ರೀತಿಗಾಶ್ರಯರಿವರು
ಕೋಪದಿಂದೆಲ್ಲರಿಗು ಭಯಕೆ ತಕ್ಕವರು
ಪಕ್ಷಪಾತವು ಬಳಿಯೆ ಸುಳಿಯದಾಯಿತುಯಿವರ
ಲಂಚವನು ಕಾಣುವೊಡೆ ಕುರುಡರಿವರು ||25||

ಮಂತ್ರಿಪದವಿಯು ಕೈಯೊಳಿದ್ದರೂ ನಿಸ್ಪೃಹರು
ಲೋಭದಿಂ ಧನದ ಸಂಚಯಕೆಳಸಲಿಲ್ಲ
ತಮ್ಮ ಮಕ್ಕಳಿಗೆನುತೆ ನೆಂಟರಿಷ್ಟರಿಗೆನುತೆ
ಕುಳಿತುಂಬ ತೆರೆದೊಳಾಸ್ತಿಯ ಮಾಡಲಿಲ್ಲ ||26||

ಅಲ್ಪ ವಿದ್ಯೆಯ ಕಲಿತು ಬುದ್ಧಿಯಿಂ ಬಲ್ಲಿದರ್
ದಕ್ಷತೆಗೆ ತೌರಾಗಿ ಬಾಳಿ ಬೆಳಗಿದರು
ಜಟಿಲ ವಿಷಯಗಳಲ್ಲಿ ನ್ಯಾಯವಾದಿಗಳಿವರು
ಗುಣಗಳಿಂದೆಲ್ಲರನು ಗೆಲ್ದರಿವರು ||27||

ಇಂತು ಗುಣ ಗಡಣದೊಳು ದೋಷವೊಂದಡಗಿತ್ತು
ಚಂದ್ರನಲಿ ಕಪ್ಪಿರುವ ಮಾಳ್ಕೆಯಿಂದೆ
ವಿಷಯಾಭಿಲಾಷೆಯದು ದೋಷವೆನಲಾ ಕಬಾ
ಲಗ್ನವಾದರು ಮತ್ತೆ ಮತ್ತೆ ನಾಲ್ವರನು ||28||

ಮೊದಲನೆಯ ಸತಿಯೋರ್ವ ಕನ್ಯೆಯಂ ಕೈಗಿತ್ತು
ತೆರಳಿದಳು ಬರ್ದಿಲಕೆ ಮುತ್ತೈದೆಯಾಗಿ
ಅನ್ಯಳಾ ಸ್ಥಳವನಾಕ್ರಮಿಸಿ ಕನ್ಯೆಯ ಪಡೆದು
ಪಯಣಮಂ ಬೆಳೆಯಿಸಿದಳಕ್ಕ ನಿದ್ದೆಡೆಗೆ ||29||

ಸತಿಯರಿಲ್ಲದ ಚಿಂತೆ ಶಿಶುಪಾಲನೆಯ ಚಿಂತೆ
ರತಿ ಪತಿಯ ಬಾಣಗಳ ಕೋಟಲೆಯ ಚಿಂತೆ
ಗತಿಯ ಕಾಣಿಸುವಂಥ ಪುತ್ರನೋರ್ವನ ಚಿಂತೆ
ಯಿಂತು ಚಿಂತೋದಧಿಯೊಳದ್ದನಾಗ ಕಬಾ ||30||

ವಿರಸವಾಯಿತು ಬಾಳಿದೆನ್ನುತೆ ಮನಸಿಜನು ತಾ ಬಾಧಿಸಲ್
ವರುಷ ನಾಲ್ವತ್ತಾದರೆಯು ತಾ ವಿರತನಾಗದೆ ವಿಷಯದೊಳ್
ಹರುಷದಿಂ ಭಾರತದ ಭಾಗ್ಯವು ತೆರೆದಿರಲ್ಕಾ ಗಾಂಧಿಯು
ವರಿಸಿದನು ತಾ ಸ್ವರ್ಣ ಪುತ್ಥಳಿ ಪುತಲಿ ಬಾಯಿಯ ಸಾದರಂ
||31||

ಆವ ಸಾಧ್ವಿಯ ಜಠರ ಭಾರತರತ್ನಕದು ಭಂಡಾರವೋ
ಆವಳಾದಳೊ ಪೂರ್ವದಿಗ್ವಧು ಲೋಕಬಂಧುವಿನುದಯಕೆ
ಆರು ಚಾತುರ್ಮಾಸ್ಯ ನಿಯಮದಿನಾತ್ಮಶುದ್ಧಿಯ ಪಡೆದಳೊ
ಆ ಮಹಾತ್ಮನ ಧರಿಸುವಂತಹ ಸ್ವರ್ಣಪುತ್ಥಳಿ ಪುತಲಿಯು
||32||

ಸಾಧ್ವೀಮಣಿಯ ಪಡೆದು ರಂಜಿಸಿದರಾ ಕಬಾ
ರತಿಯ ಹೊಂದಿದ ಮೀನಕೇತನನ ತೆರದಿ
ಶಚಿಯ ಕರವನು ಪಿಡಿದ ಬರ್ದಿಲೊಡೆಯನೊ ಎನಲು
ಪಾಲ್ಗಡಲ ಕುವರಿಯಂ ವಿಷ್ಣು ಪಡೆದಂತೆ ||33||

ಹದಿಬದೆಯ ರೆದುರಿನಲಿ ಬಣ್ಣಿಸಲು ಸರಿಯೆನಿಪ
ಸುದತಿ ಪುತಲೀ ಬಾಯಿ ಪತಿಯನನುಸರಿಸಿ
ಮುದದಿ ನೆರವಾಗುತಲಿ ರಾಜಕಾರಿಯಗಳಲಿ
ಆದಳ್ಳೈ ಮಂತ್ರಿ ತಾ ಕರ್ಮಚಂದನಿಗೆ ||34||

ಪತಿಯ ಸೇವೆಯೊಳವಳು ದಾಸಿಯೆನೆ ದುಡಿಯುವಳು
ಹಿತಳು ಪೋಷಣೆಯಲ್ಲಿ ಮಾತೆಯಂತೆ
ರತಿಯು ತಾನಾದಳಾ ಮದನ ಕೇಳಿಯೊಳೆನಲು
ಸತಿಯೆ ಸರ್ವಸ್ವವಾದಳು ರಸಿಕ ಪತಿಗೆ ||35||

ವ್ರತಗಳನು ಪಾಲಿಪೊಡೆ ಬಹುನಿಷ್ಠೆಯಾ ಸತಿಗೆ
ತಾಹವೇಲಿಗೆ ಹೋಗದಿರುವ ದಿನವಿಲ್ಲ
ದೇವಪೂಜೆಗೆ ಮೊದಲು ನೀರಕುಡಿಯಳದೆಂದು
ಧರ್ಮಭೀರುವು ತಾನು ಪುಣ್ಯಮೂರುತಿಯು ||36||

ತಾಚತುರ್ಮಾಸಗಳ ವ್ರತವ ತಪ್ಪಿದುದಿಲ್ಲ
ದಿನದೊಳೊಂದೇ ಊಟ ನಾಲ್ಕು ತಿಂಗಳೊಳು
ದಿನಬಿಟ್ಟು ದಿನವೊಮ್ಮೆ ಊಟವನು ಕೈಗೊಂಡು
ತಾನೊಂದು ವರುಷದೊಳು ವ್ರತವ ನಡೆಸಿದಳು ||37||

ವ್ರತಗಳಿಗೆ ಫಲವೆಂಬುದಾತ್ಮ ಶೋಧನೆಯಲ್ತೆ
ಸತತ ಸಾಧನವೆಂಬುದುಪವಾಸ ವಿಧಿಯು
ಚತುರಳಿಂತಾರ್ಯೆದು ಕೈಗೊಂಡಳತಿ ಕಠಿಣ
ವ್ರತವನುಪವಾಸಕ್ಕೆ ಮಿತಿಯ ಬದಲಿಸುತೆ ||38||

ಈ ಚತುರ್ಮಾಸಗಳು ಜಡಿಹಿಡಿದ ಮಳೆಗಾಲ
ಸೂರ್ಯರಶ್ಮಿಯೆ ಕಾಣದೀ ದಿವಸಗಳಲಿ
ಎಂದು ರವಿಯನು ಕಾಂಬೆನಂದು ಭೋಜನವೆನುತೆ
ನಿಯಮವನು ಹಿಡಿದಳೈ ತಾ ದೃಢವ್ರತೆಯು ||39||

ಮನೆಯ ಮಕ್ಕಳಿಗೆಲ್ಲ ತಿಳಿದುದೀ ವ್ರತನಿಯಮ
ಉತ್ಸಾಹವೆಲ್ಲರಿಗು ಭಾಸ್ಕರನ ತೋರಲ್
ಮನೆಯ ಹೊರಗಡೆ ನಿಂದು ಕಾಯುವರು ಸೂರ್ಯನನು
ಕಾಣಲೋಡುವರಮ್ಮ ರವಿಕಂಡನೆಂದು ||40||

ಬಂದು ನೋಡುವಳಾಗ ರವಿಯು ಮರೆಯಾಗಿರಲು
ನಿಂದು ಮಕ್ಕಳ ನೋಡಿ ನಗುತ ಸುದತಿ
ಇಂದು ಭೋಜನವೆನಗೆ ದೇವನಿಚ್ಛೆಯೊಳಿಲ್ಲ
ವೆಂದು ಮನೆವಾರ್ತೆಯಲಿ ತೊಡಗುವಳು ತಿರುಗಿ ||41||

ವ್ರತವನಾರಂಭಿಸುತೆ ನಡುವೆ ಕೈ ಬಿಡಳದೆಂದು
ನಿತ್ರಾಣವಾದಡೆಯು ಜ್ವರವು ಬಂದಡೆಯು
ಆ ತಾಯಿಯಿಂ ಬಂದುದುಪವಾಸದೀವೊಲವು
ತಾತ ಗಾಂಧೀಜಿಯಲು ರಕ್ತಗತವಾಗಿ ||42||

ಮರುಗುವಳು ದಿನದಿನವು ಭಾರತದ ದುಃಸ್ಥಿತಿಗೆ
ಕರಗುವಳು ನೆನೆನೆನೆದು ನಡೆದ ಕಗ್ಗೊಲೆಯ
ಸೊರಗುವಳು ಪರಿತಪಿಸಿ ಕೆಂಪುಜನರುಪಟಳಕೆ
ಮೊರೆಯಿಡುವಳಾದೇವ ದೇವಕೀ ಸುತಗೆ ||43||

ಎಲೆದೇವ! ನೀನಂದು ಶಿಶುಪಾಲನಂ ಕೊಂದು
ಬಲುನೊಂದು ಯುದ್ಧದಿಂ ಹಿತವಲ್ಲವೆಂದು
ಇಲ್ಲಿ ಗೈ ತಂದಿರುವೆ ಬಿಲ್ಲ ಶಾರ್ಙ್ಗವ ಬಿಸುಟು
ಬಲು ಚೆಲುವ ರಣಛೋಡ ನಾಥನೆನಿಸಿರುವೆ ||44||

ಕಾರುಣ್ಯ ಮೂರುತಿಯೆ ಕರುಣಿಸೋರ್ವನ ಸುತನ
ನರುಣ ಜನರನು ದೂರ ಸರಿಸುವವನ
ಕರುಣೆಯಿಂ ದೀನರರನ್ನುದ್ಧರಿಸೆ ದುಡಿವವನ
ಭಾರತವ ಯುದ್ಧವಿಲ್ಲದೆಯೆ ಗೆಲ್ಲುವವನ ||45||

ಸತ್ಯವೇ ವ್ರತವೆಂದು ಬಿಡದೆ ಪಾಲಿಸುವವನ
ನಿತ್ಯ ಕರ್ಮವೆ ದೈವವೆಂದು ಬಗೆವವನ
ಸತ್ಯ ಶೋಧನೆಗಾಗಿ ಕಷ್ಟವನು ಸಹಿಸುವವನ
ನಿತ್ಯ ನಿರ್ಮಲನಂತೆ ಸತ್ಯಸುಂದರನ ||46||

ಎನುತೆ ಪುತಲಿಯು ಮನದಿ ದೇವನಂ ಜಾನಿಸುತೆ
ತನುಮನವ ನಿಯಮದಿಂ ಶುದ್ಧಿ ಗೊಳಿಸಿ
ಅನುವಾದಳೆನೆ ತಾನು ಪುಣ್ಯಪುರುಷನ ಧರಿಸೆ
ದಿನವು ತಪಮಂ ಗೈಯ್ಯುತಿರ್ದಳಾ ಸತಿಯು ||47||

ಭಾರತಾಂಬೆಯ ಗೋಳನಾರು ಕೇಳುವರಂದು
ವೀರ ಪುತ್ರರು ದಾಸ್ಯ ಶೃಂಖಲೆಯ ತೊಡಲು
ಹಾರಿತುತ್ಸಾಹವದು ಸೀಪಾಯಿ ದಂಗೆಯಲಿ
ಮೀರಿ ಕುಳಿತರು ಧೂರ್ತರಾ ಕೆಂಪು ಜನರು ||48||

ವ್ಯಾಪಾರಕಾಶ್ರಯವ ಕೋರಿ ಬಂದಿಹ ಜನರು
ಭೂಪಾಲರಾದರೆನೆ ವಿಧಿಯ ಮಾಟವದು
ಕಾಪಾಡುವವರಿಲ್ಲ ಕೆಂಪು ಜನರುಪಟಳದಿ
ತಾಪಾಡು ಪಡುತಿರ್ದುದೀ ಕಪ್ಪು ಜನವು ||49||

ಕೆಂಪು ಜನರೆನೆ ನಾವು ಕೈ ಮಾಡುವಂತಿಲ್ಲ
ದೂರಿಡಲು ಕೆಂಪುಜನ ದೇವತೆಗಳಲ್ಲಾ !
ಅವರೊಡನೆ ನಿಲಲಿಲ್ಲ ಕೂರಲೆಡೆ ಮೊದಲಿಲ್ಲ
ಕಪ್ಪುಜನಕೆಲ್ಲಿಯೂ ಸ್ಥಾನವಿಲ್ಲಾ ||50||

ನಮ್ಮ ಜನರನೆ ತಮ್ಮ ಸೈನ್ಯದಲಿ ಸೇರಿಸುತೆ
ತಮ್ಮ ಜನ ಸೈನ್ಯಾಧಿಪತಿಗಳಾಗಿರಲು
ನಮ್ಮ ಧನದಿಂದವರ ಸಲಹಿ ದಣಿಗಳು ತಾವು
ನಮ್ಮ ರಾಜ್ಯವ ಗೆಲಲು ಯೋಧರವರು ||51||

ಬಂದನಾ ಡಾಲ್‌ಹೌಸಿ ದುರ್ಮಂತ್ರಕಾದಿ ಋಷಿ
ನಿಂದ ಸಂಸ್ಥಾನಗಳ ನುಂಗಲೆಳಸಿ
ನಿಂದ್ಯ ಕಾರ್ಯಕೆ ಹೇಸದಿರುವನಾ ಪರದೇಸಿ
ಸಂದ ಮೋಸದಲವನು ಬಲು ಹೆಸರು ವಾಸಿ ||52||

ದತ್ತು ಮಕ್ಕಳಿಗಿಲ್ಲ ರಾಜ್ಯಾಧಿಕಾರವೆನು-
ತೆತ್ತಿ ಹಾಕಿದನಂದು ಹಲವು ರಾಜ್ಯಗಳ
ಹೊತ್ತು ಸಾಧಿಸಿ ನೃಪರೊಳನ್ಯಾಯವನು ಹೊದಿಸಿ
ಇತ್ತ ತೀರ್ಪನು ಗೌರವದ ಸೆರೆಯೊಳಿರಿಸೆ ||53||

ರಾಜ್ಯದಾಸೆಯ ತೋರಿ ಭೇದಿಸಿದ ಕೆಲವರನು
ವ್ಯಾಜ್ಯದಲ್ಲುಳಿದವರ ತುಳಿದು ಗೆಲ್ದನು ತಾ
ಆಜ್ಯವನು ಕುಡಿದಂತೆ ದಾಹವಡಗದು ಅವಗೆ
ರಾಜ್ಯವನು ಕಾವವನೆ ಕಡು ವೈರಿಯವಗೆ ||54||

ಆತನೆಸಗದ ಮೋಸವಿನ್ನಿಲ್ಲ ಜಗದೊಳಗೆ
ಮಿತ್ರರನು ದುರ್ಗತಿಗೆ ತಂದು ಮೆರೆದನುತಾ
ಹೊತ್ತ ಸಾಧಿಸಿ ನಂಬಿದವರ ಕತ್ತನು ಕುಯ್ದು
ತೊತ್ತುಗಳ ಮಾಡಿದನು ಭಾರತೀಯರನು ||55||

ಗೋವುಗಳ ಕೊಬ್ಬಿನಿಂ ಜಾತಿ ಕೆಡಿಸುವರೆಂಬ
ಭಾವದಿಂ ಸೀಪಾಯಿ ದಂಗೆ ಮೆರೆಯೆ
ಇವನ ಕೃತ್ಯಕೆ ಹೇಸಿ ಜನವೆಲ್ಲ ಕಣ್ದೆರೆಯೆ
ತಾವು ದಡಬಡಿಸಿದರು ಕೆಂಪುಜನರು ||56||

ಮೀರತದ ಶಾಣ್ಯದಿಂ ಸಿಡಿದ ಕಿಡಿ ದೆಹಲಿಯ
ಲ್ಲುರಿದು ಸುಡತೊಡಗಿ ತಾ ಕೆಂಪು ಜನರ
ಭಾರತದೊಳೆಲ್ಲೆಡೆಯೊಳನಿರೀಕ್ಷಿತವುಯೆನಲ್
ಹರಡಿತದು ಚಣದಿ ತಾನಶನಿ ವೇಗದಲಿ ||57||

ಮೂರು ದಿನದಲಿ ಬಿಳಿಯರಿಲ್ಲ ದಿಲ್ಲಿಯಲೆನಲು
ಕಾನಪುರದರಸನಾದನು ತಾನು ನಾನಾ
ವ್ಹೀಲರನು ಹೌಹಾರಿ ಕುಳಿತಿರಲು ಮೋಸದಲಿ
ನಾವೆಯಲಿ ಕುಳ್ಳಿರಿಸಿ ಕೊಂದರೆಲ್ಲರನು ||58||

ಹೆವಲಾಕನ್ನೈ ತರಲು ಬಿಡಿಸಲ್ಕೆ ಲಲನೆಯರ
ನವಸಾನವಾಯಿತ್ತು ರಾತ್ರಿ ಸೆರೆಯಲ್ಲೆ
ಹೇವ ಕಾರ್ಯವನೆಸಗಿ ಫಲವನುಂಡರು ಬಳಿಕ
ಲವಸಾನ ವಿಲ್ಲದಿರಲೆಮ್ಮ ದುರ್ವಿಧಿಗೆ ||59||

ಅತ್ತ ಹೆವಲಾಕ ತಾ ಹುಚ್ಚೆದ್ದು ರೋಷದಲಿ
ಹತ್ತಿಸಿದ ಬೆಂಕಿಯನ್ನೂರುಗಳಿಗೆ
ಎತ್ತ ನೋಡಿದರತ್ತ ಹಿಂದುಗಳ ಕಗ್ಗೊಲೆಯು
ಹತ್ಯೆಯಿದ ಬಣ್ಣಿಸಲು ಶಕ್ಯವಿಲ್ಲೆನಗೆ ||60||

ಕಂಡ ಕಂಡವರನ್ನು ಗುಂಡಿಕ್ಕಿ ಕೊಲ್ಲುತಲಿ
ಬಂಡುಗಾರರ ತೋಪು ಬಾಯಿ ಗಿರಿಸಿ
ಕೆಂಡವಾದರು ಕೆಂಪುಜನರದುವೆ ತಾವೆನಲ್
ದಂಡದಿಂದುಗ್ರರೆನೆ ನಡುಗೆ ಜನವು ||61||

ನಾಯಕರ ಬಲ್ಲವಿಲ್ಲ ಮಂತ್ರಿಗಳು ಮೊದಲಿಲ್ಲ
ನ್ಯಾಯ ನೀತಿಗಳಿಲ್ಲ ಹಿಂಸೆಗಳಲಿ
ಬೇಯ ತೊಡಗಿತು ದೇಶ ವಿದ್ರೋಹದುರಿಯಲ್ಲಿ
ಪಾಯ ತಪ್ಪಿರಲಂದು ಸೀಪಾಯಿದಂಗೆ ||62||

ದೌರ್ಭಾಗ್ಯ ಕೆರವಾಗಿ ಲಕ್ಷೋಪಲಕ್ಷ ಜನ
ರ ಭ್ಯಾಗತರು ಯಮನಿಗಾದರೆಮ್ಮವರು
ಸ್ವರ್ಭಾನು ಮಂಡಲವ ಭೇಧಿಸಲ್ಕರಿದೆನಲು
ನಿರ್ಭಾಗ್ಯನೇರಿದನು ಶೂಲವನು ತಾತ್ಯಾ ||63||

ತೈಲ ಮುಗಿಯಲು ದೀಪ ಬತ್ತಿಯನೆ ಸುಡುವಂತೆ
ಬಲವು ಕುಂದಲು ನಮ್ಮ ಜನರ ಸುಟ್ಟು
ಆರಿತಾ ದಂಡೆಯುರಿ, ಕತ್ತಲಲಿ ತೊಳಲುತಲಿ
ಭಾರತದ ಜನವೆಲ್ಲ ಕಂಗೆಟ್ಟುದಾಗ ||64||

ಕಿತ್ತೂರು ಚೆನ್ನಮ್ಮ ಸಂಗೊಳ್ಳಿ ರಾಯಣ್ಣ
ಮತ್ತೆ ಝಾಂಸಿಯ ರಾಣಿ ಲಕ್ಷ್ಮಿ ಬಾಯಿ
ಕೀರ್ತಿಯಿಂದುಳಿಯಲ್ಕೆ ಭಾರತದ ಜನ ತಿರುಗಿ
ಹೊತ್ತು ದಾಸ್ಯವ ಕೆಂಪು ಜನವ ಸೇವಿಸಿತು ||65||

ಅವರ ಭಾಷೆಯ ಕಲಿತು ನಮ್ಮ ತಾಯಿಯ ಮರೆತು
ಅವರ ಧರ್ಮವನರಿತು ನಡೆಯ ಕಲಿತು
ಅವರ ಜಾತಿಯ ಬೆರೆತು ಹ್ಯಾಟು ಬೂಟನು ಧರಿಸಿ
ಅವರ ಬಾಯ್ದಂಬುಲಕೆ ಕೈಯ್ಯೊಡ್ಡ ಬೇಕು ||66||

ಭಾರತದ ಸಂಪದವನವರು ಹೊರುತಿರಬೇಕು
ನಾವವರು ಕೇಳಿದುದ ಕಟ್ಟಿ ಕೊಡಬೇಕು
ಭಾರತೀಯರು ನಾವು ತೆರಿಗೆಯನು ಕೊಡಬೇಕು
ಕುರಿಗಳಂದದಿ ಶಿರವ ಬಾಗಿ ನಿಲಬೇಕು ||67||

ಭಾರತದ ಜನವಿಂತು ಕಂಗೆಟ್ಟು ಚಿಂತಿಸುತೆ
ಭೂರಮಣನಂ ನೆನೆಯೆ ಕಾರುಣ್ಯ ನಿಧಿಯು
ಭಾರತದ ಬಿಡುಗಡೆಗೆ ಶೂರ ಸತ್ಯಾಯುಧನ-
ನಾರಯ್ದು ಕಳುಹಿದನು ಪುತಲಿಯಲಿ ಜನಿಸೆ ||68||

ವ್ರತಗಳಿಂ ಶುದ್ಧಳಹ ಪುತಲಿ ತಾ ಧರಿಸಿದಳ್
ಖ್ಯಾತ ಮೋಹನನನ್ನು ತನ್ನ ಜಠರದಲಿ
ಅತಿ ತೇಜದಿಂದಾಗ ರಂಜಿಸಿದಳಾ ಸುದತಿ-
ಯಾತರಣಿಯಂ ಪೊತ್ತ ಮೂಡಣಂಗೆನೆಯೋಲ್ ||69||

ಮಲರಹಿತನೀಕುವರನಿವನಿರುವ ಜಠರವಿದು
ಶುದ್ಧವಾಗಿರಲೆನುತೆ ತೊಳೆಯುತಿಹಳು
ಓಕರಿಕೆ ನೆಪದಿಂದಲೆನುವವೋಲ್ ತೋರಿದಳು
ಸುಖದ ಸಂಕಟವಂದು ಹಿತವಾಯ್ತು ಸತಿಗೆ ||70||

ಬಯಕೆ ಸಂಕಟದಿಂದೆ ಪುತಲಿ ಬಯಸಿದುದನ್ನು
ಪ್ರಿಯಕರನು ತಂದಿತ್ತ ನಾ ಕ್ಷಣದೊಳೆ ಕಬಾ
ತಾಯಾಗಲಿರುವ ತನ್ನರಸಿಯನು ರಮಿಸುವುದೆ
ಪ್ರಿಯನ ಸೌಭಾಗ್ಯವೆನಲಚ್ಚರಿಯದೇನು? ||71||

ಪತಿಯು ತಾನ್ನೈತರಲು ಗರ್ಭಭರದಿಂ ಪುತಲಿ
ಅತಿ ಕಷ್ಟದಿಂದೇಳಲೆತ್ನಿಸುತ್ತಿರಲು
ಅತಿ ಹರ್ಷದಿಂ ನಗುತೆ ಪಿಡಿದೆತ್ತಿ ಮುದ್ದಾಡಿ
ಪತಿರಾಯ ತೃಪ್ತಿಯನು ಪಡೆಯದಾದ ಕಬಾ ||72||

ಮೋಹನನ ಗರ್ಭದಲಿ ಧರಿಸಿರುವ ಕಾಮಿನಿಯು
ಮೋಹಿನಿಯು ತಾನಾದಳಂದು ಪ್ರಿಯತಮಗೆ
ಬಿಳಿಚಿರುವ ಮುಖವನ್ನು ನೋಡಿ ದಣಿಯನು ಪತಿಯು
ಗರ್ಭಿಣಿಯರಂದವೇ ಚಿಂದ ಜಗದೊಳಗೆ ॥73॥

ಇಂತು ನವ ಮಾಸಗಳು ತುಂಬಿ ಬರಲಾ ಲಲನೆ-
ಯಂತ ಗೊಳಿಸಲ್ ಕೆಂಪು ಜನರ ಕೋಟಲೆಯಂ
ಕಂತುಪಿತ ಕರುಣಿಸಲ್ ಭಾರತದ ಸಂತನ-
ತ್ಯಂತ ಮೇಧಾವಿಯನು ಜಗಕೆ ನೀಡಿದಳು ॥74॥

ಸಾವಿರದ ಎಂಟು ನೂರರುವತ್ತು ಒಂಭತ್ತು
ಕ್ರಿಸ್ತಶಕದಕ್ಟೋಬರೆರಡನೆಯ ದಿನದೊಳ್
ಭಾರತದ ಭಾಗ್ಯರವಿ ದೀನ ಜನತಾ ಮಿತ್ರ
ಸ್ವಾತಂತ್ರ್ಯ ಮಾರ್ತಾಂಡನುದಯ ಹೊಂದಿದನು ॥75॥

ಒಂದು ಸಾವಿರದೇಳು ನೂರ ತೊಂಬತ್ತೊಂದು
ಶಾಲಿವಾಹನ ಶಕದ ಭಾದ್ರಪದದಲ್ಲಿ
ಬಹುಳ ದ್ವಾದಶಿಯ ದಿನ ಸತ್ಯಸುಂದರ ಬಂದ
ತಾನಹಿಂಸೆಯ ಮೂರ್ತಿ ನಿತ್ಯ ಕೀರುತಿಯಿಂ ॥76॥

ವಣಿಜ ಲಗ್ನದೊಳಂದು ಬೆಳಗಿನಲಿ ಜನಿಸಿದನು
ಲಗ್ನದಲಿ ಬುಧ ಶುಕ್ರ ಕುಜರು ಜೊತೆಯಾಗಿ
ಗುರುದೃಷ್ಟಿಯುತನಾಗಿ ದ್ವಾದಶದೊಳಾರವಿಯು
ಧನದ ಮನೆಯಲಿ ಶನಿಯು ವೃಷಭದಲಿ ಗುರುವು
||77||

ಚಂದ್ರನಿಂ ದಶಮದಲಿ ಕುಜದೃಷ್ಟಿಯುತನಾಗಿ
ಗುರುವಿರಲು ಶಶಿಯು ತಾ ಸಿಂಹರಾಶಿಯಲಿ
ದಶಮ ಸುಖದಲಿ ರಾಹು ಕೇತುಗಳು ತಾವಿರಲು
ಎಂಟಕ್ಕೆ ಕಡಿಮೆಯಾಗಿರೆ ಕಾಲು ಘಂಟೆ ||78||

ಬಾನು ತಿಳಿದುದು ಗಾಳಿ ಹಿತದಿ ಬೀಸುತಲಿರಲು
ಎಡದ ಕಣ್ಣದುರಿತ್ತೈ ಭಾರತಾಂಬೆಯದು
ಉಸಿರು ಸಿಕ್ಕಿತು ಕೆಂಪು ಜನಕೆದೆಯು ಡಬಡಬಿಸೆ
ಪುಣ್ಯ ಮೂರುತಿ ಗಾಂಧಿಯುದಯ ಕಾಲದಲಿ ||79||

ಉಪವಾಸ ವ್ರತಗಳಿಗೆ ಫಲವು ದೊರೆತುದು ಇಂದು
ಹೆಣ್ಣಾಗಿ ಹುಟ್ಟಿದುದು ಸಾರ್ಥಕವು ಎಂದು
ಮುದ್ದು ಕಂದನ ಕಂಡು ನಿಡುಸುಯ್ದಳಾಪುತಲಿ
ಭಾರತದ ಕಷ್ಟ ತಾ ಕಳೆಯಿತಿಂದೆಂದು ||80||

ಸುತನ ಜನ್ಮವ ಕೇಳಿ ಕರ್ಮಚಂದನು ತಾನು
ಸಂತಸದ ಮಡುವಿನಲಿ ಹಾರಿ ಮುಳುಗಿದನು
ಅಂತವಿಲ್ಲದ ದಾನ ದಕ್ಷಿಣೆಗಳನು ಕೊಟ್ಟು
ಸಂತಸಂಬಡಿಸಿದನು ಭೂಸುರರ ಕರೆಸಿ ||81||

ಕಲ್ಲು ಸಕ್ಕರೆಯನ್ನು ತರಿಸಿದನು ಬಂಡಿಯಲಿ
ಫುಲ್ಲ ವದನನು ಊರಿಗೆಲ್ಲ ಹಂಚುತಲಿ
ಎಲ್ಲ ಹಿರಿಯರ ಕಂಡು ನಮಿಸಿದನು ವಿನಯದಲಿ
ಪಲ್ಲವಿಸೆ ಹರಕೆಯದು ಕಲ್ಪಲತೆಯಾಗಿ ||82||

ದಾಸ ದಾಸೀಜನಕೆ ಬೇಕು ಬೇಕಾದುದನು
ಕೋಶ ಬರಿದೆನೆ ಕೊಟ್ಟು ನಲಿದನಾಗ
ಭೂಷಣವು ತಾನಾಯ್ತು ದಾನದಿಂ ಬಡತನವೆ
ಮಾಸದಿಹ ಕೀರ್ತಿ ತಾ ದೊರೆತುದವಗೆ ||83||

ಕರ್ಮಚಂದನು ತನ್ನ ಪುಣ್ಯ ಕರ್ಮದ ಫಲವ
ಕರ್ಮಯೋಗಿಯ ಕಂಡು ಜಾತಕರ್ಮವನು
ಮಾಡಿದನು ಕಂದನಿವ ಗುಣಗಳಿಂ ಮೋಹನನು
ಎನುತೆ ಮೋಹನನೆಂದು ನಾಮ ಕರಣವನು ||84||

ಹದಿನೈದನೆಯ ದಿವಸ ಹದಿಬದೆಯರೈತಂದು
ಮುದದಿ ತೊಟ್ಟಿಲೊಳಿಟ್ಟು ಚೆಂದದಿಂದ
ಕಂದನನು ತೂಗಿದರು ಲಾಲಿಯನು ಪಾಡುತ್ತ -
ಲಂದು ಪುತಲಿಯ ಹರುಷ ಹಿಡಿಸದಿರಲು ॥85॥

॥ ಗಾಂಧೀ ಲಾಲಿ ॥

ಮೋಹನ ಲಾಲೀ ಪುತಲೀ ಭಾಗ್ಯವೆ ಲಾಲೀ ।
ಪೋರಬಂದರ ಭಾಗಧೇಯವೆ ಬಾಪೂ ಲಾಲೀ ॥ಪ॥
॥86॥

ದ್ವಾಪರಯುಗದಲಿ ಭಾರತಯುದ್ಧವ ನಿಲ್ಲಿಸಲಾಗದೇ - ನೊಂದು
ಕಲಿಯುಗದಲಿ ರಣಛೋಡನಾಥನು ತಾನಾದನು ಕೃಷ್ಣ
ಪೋರಬಂದರ ದೇವನಾತನ ಇಚ್ಛೆಯ ನೀ ಸಲಿಸು - ಕಂದ
ನೀನಹಿಂಸೆಯ ಮೂರ್ತಿಯಾಗಿ ಭಾರತವನು ಜಯಿಸು ॥87॥

ಗಾಂಧಿ ಲಾಲೀ ಮೋ.ಕ. ಗಾಂಧಿ ಲಾಲೀ
ಬಂಧನ ಬಿಡಿಸೋ ಭಾರತ ಮಾತೆಯ ಕಂದಲಾಲೀ
||88||

ಕೆಂಪುಜನರಾ ವಂಚನೆಯೊಳು ತಾ ಭಾರತ ಸಿಲುಕಿತ್ತು
ಸಂಪು ಹೂಡಿದ ಸೀಪಾಯಿಗಳಿಗೆ ಕಗ್ಗೊಲೆಯಾಗಿತ್ತು
ರಂಪವಿದನು ಬಣ್ಣಿಸಲಾವಗೆ ಶಕ್ಯವಾಯಿತ್ತು
ಹಂಪೆಯಾಳ್ದನ ಕರುಣದಿ ನೀನೆ ಬಿಡಸೋ ಈ ಹೊತ್ತು
||89||

ಬಾಪೂ ಲಾಲೀ ಸತ್ಯಮೂರ್ತಿ ಲಾಲೀ
ರಘುಪತಿ ರಾಘವ ರಾಜಾರಾಮನೆ ತಾರಕ ಲಾಲೀ
||90||

ಡಾಲಹೌಸಿಯ ಕೃತ್ಯಕೆ ಹೇಸಿ ನಾನಾ ಸಾಹೇಬ
ತಾತ್ಯಾಟೋಪಿಯು ಎದ್ದು ನಿಂತರು ದಿಲ್ಲಿಯ ಬಾದಶಹ
ನಮ್ಮಯ ಜನರೇ ಹಿಡಿದೂ ಕೊಟ್ಟರು ಲಂಚಕೆ ಬಲಿಬಿದ್ದು
ವಿಧಿಯೆದುರಾಗಿರಲನ್ಯರ ನಾವು ದೂರುವುದೇ ತಪ್ಪು
||91||

ತಂದೆ ಲಾಲೀ ದೀನ ಬಂಧು ಲಾಲೀ
ಗಾಂಧೀವಂಶಕೆ ಭೂಷಣ ಸತ್ಯದ ಬಿಂಬ ಲಾಲೀ ||92||

ಹಿಂಸೆಯ ಬೀಜದಿ ಶಾಂತಿಯು ಎಂದಿಗು ದೊರೆಯದು ಕಂದಯ್ಯಾ
ಹಿಂಸೆಗೆ ಹಿಂಸೆಯ ಮಾಡುತ ಹೋದರೆ ನಿಲುಗಡೆಯಿಲ್ಲಯ್ಯಾ
ಹಿಂಸೆಯ ಬಿಡುನೀ ಸತ್ಯವ ಹಿಡಿ ನೀ ಜಯವದೆ ನಿನಗಯ್ಯಾ
ಕಂಸನ ಕೊಂದವ ಪೇಳಿದ ಗೀತೆಯ ಬಿಡದೇ ಪಠಿಸಯ್ಯಾ
||93||

ಇಂತು ಮುತ್ತೈದೆಯರು ಕಂದನನು ತೊಟ್ಟಿಲಲಿ
ಸಂತಸದಿ ಹರಸುತ್ತೆ ತೂಗುತಿರಲು
ನಿಂತು ನೋಡುತೆ ಹರಕೆ ಸಫಲವಾಗಲಿ ಯೆಂದು
ಕಂತು ಪಿತನನು ಮನದಿ ನೆನೆದಳಾ ಪುತಲಿ ||94||

ಮಾತೆ ಮಮತೆಯಿನಿತ್ತ ಹೃದಯದಮೃತವನುಂಡು
ತಾತ ಕುಡಿಸಿದ ದಿವ್ಯ ಪ್ರೇಮದೌಷಧಿಯಿಂ
ದಾತನುಜ ದಿನದಿನವು ಶುಕ್ಲ ಶಶಿಯಂದದಲಿ
ಬೀತು ಬೆಳೆಯುತಲಾದ ತಾನು ಮೋಹನನು ||95||

ಮಗುವು ಮಲಗಿಹುದೆನುತೆ ತಾಯಿ ಹೊದಿಕೆಯ ಹೊದಿಸಿ
ಪೋಗಲೂಟವ ಮಾಡಿ ಬರುವೆನೆನುತೆ
ಆಗ ಬಾಣಂತಿಯರಿಗತಿಮಿತವು ಹಿತವೆನುತೆ
ರಾಗವನು ಪಾಡುವನು ಬುದ್ಧಿ ಕಲಿಸುವವೋಲ್ ||96||

ಹೊಟ್ಟೆ ಹಸಿದಿರೆ ತಾನು ರಾಗವನು ಪಾಡುವನು
ತಟ್ಟುತ್ತೆ ತಾಳವನು ಕಾಲಿನಿಂದ
ಮುಷ್ಟಿಯಲದಾವುದೋ ಭಾವವನು ತೋರುತ್ತೆ
ನಾಟ್ಯಪಟುವನು ತಾನು ನಾಚಿಸುವ ತೆರದಿಂ ||97||

ರೆಪ್ಪೆಯನು ಬಡಿಯುವುದೆ ವಿಘ್ನವೆನಲಾ ತಾಯಿ
ಮುದ್ದು ಕಂದನ ಮುಖವ ದಿಟ್ಟಿಸುತ್ತೆ
ಕಪ್ಪು ಬಳಿಯುವಳಾಗ ಕೆನ್ನೆಯಲಿ ಕಂಗಳಲಿ
ತನ್ನ ದೃಷ್ಟಿಯದೆಲ್ಲಿ ತಾಗುವುದೊ ಎನಲು ||98||

ಅಂದದಿಂ ದಿನದಿನವು ಶಿಶುವು ಬೆಳೆಬೆಳೆಯುತಿರೆ
ಚಂದದಿಂ ವರುಷ ತಾನೆರಡು ಸಂದಿರಲು
ತಂದೆ ಚೂಡಾ ಕರ್ಮವನು ಮಾಡೆ ವಿಧಿಯಂತೇ
ಕಂದ ಮುಂಜುಟ್ಟಿನಿಂ ಮೋಹನನೆ ನಿಜದಿ ||99||

ಐದನೆಯ ವರುಷದೊಳ್ ಗಣಪನಂ ಪೂಜಿಸುತೆ
ವೈದಿಕರ ಹರಕೆಯುಂ ಪಡೆದು ಮುದದಿಂ
ಗೈದ ತಾನಕ್ಷರಾಭ್ಯಾಸವನು ಅದರಿಂದ -
ಲೈದಲೀ ಕುವರತಾ ವಿದ್ಯೆಗಳನೆಂದು ||100||

ಪೋರಬಂದರದಲ್ಲದಾವುದೋ ಶಾಲೆಯನು
ಸೇರೆ ಕಷ್ಟವದಾಯ್ತು ಬುದ್ಧಿ ಬೆಳೆಯದಿರೆ
ಸೇರದಾಯಿತ್ತವಗೆ ಮಗ್ಗಿಗಳ ಕಲಿಯುವುದು
ಪೋರ ತಿರುಗಿದನಂದು ವ್ಯರ್ಥವಾಗಿ ||101||

ಸಜ್ಜನರ ಸಂಗವಿರೆ ಸದ್ಗುಣವು ಬಂದಪುದು
ದುರ್ಜನರ ಸಂಗದಿಂ ಬಹುದು ದುರ್ಗುಣವು
ಸಜ್ಜನಿಕೆಯಿದ್ದರೂ ಜೊತೆಯ ಹುಡುಗರ ಸೇರಿ
ಬಿಜ್ಜೆ ಯೋಜರ ಹಳಿಯೆ ತೊಡಗಿದನು ಗಾಂಧಿ ||102||

ಪೋರಬಂದರ ಬಿಟ್ಟು ರಾಜಕೋಟೆಗೆ ತೆರಳ-
ಲೇಳನೆಯ ವರುಷದಲಿ ಪಿತನ ಜೊತೆಗೆ
ಸೇರಿದನು ಮೋಹನನು ಪ್ರಾಥಮಿಕ ಶಾಲೆಯನು
ವರುಷ ಹನ್ನೆರಡಾಗೆ ಪ್ರೌಢಶಾಲೆಯನು ||103||

ಬರಬರುತೆ ಬುದ್ಧಿ ತಿಳಿದೆಚ್ಚೆತ್ತು ಮೋಹನನು
ಹರುಷದಿಂ ವಿದ್ಯೆಯನು ಕಲಿಯ ತೊಡಗಿದನು
ಸೇರನನ್ಯರ ಜೊತೆಯ ಮುಖಹೇಡಿಯೆಂಬಂತೆ
ತೋರಿದನು ಪುಸ್ತಕವೆ ಜೊತೆಯಾಯಿತವಗೆ ||104||

ನುಡಿಯನನೃತವನೆಂದು ಗುರುಗಳಲಿ ಗೆಳೆಯರಲಿ
ಬಿಡದೆ ಓದುವನೆಲ್ಲ ಪಠ್ಯಪುಸ್ತಕವಂ
ಹಿಡಿದ ಪುಸ್ತಕದಲ್ಲಿ ಮನವು ತಾ ನಟ್ಟಿರಲ್
ಓದುವನು ಮನೆಗೆ ತಾ ಶಾಲೆ ಮುಗಿದೊಡನೆ ||105||

ಮನೆಯಲ್ಲಿ ಪೇಳುವಳು ರಾಮ ಚರಿತವ ತಾಯಿ ।
ದಿನದಿನವು ಬಣ್ಣಿಪಳು ರಾಮರಾಜ್ಯವನು
ತಾನಾಗಿ ತನ್ಮಯನು ಕೇಳುವನು ಬಾಲಕನು
ಮನದಲ್ಲೆ ಕಟ್ಟುವನು ರಾಮರಾಜ್ಯವನು ||106||

ತಾಯಿಯೇ ಗುರುವವಗೆ ತಾಯಿಯೇ ಸಖನವಗೆ
ತಾಯಿ ತಾ ದಾಸಿ ಯೆನಲನ್ನ ಬಟ್ಟೆಯಲಿ
ತಾಯಿಯೇ ದೈವತವು ತಾಯಿಯನು ಬಿಟ್ಟಿರನು
ತಾಯಿಯೇ ಸರ್ವಸ್ವ ಮುದ್ದುಮೋಹನಗೆ ||107||

ತಂದೆಯೋದಲು ತಂದ ಶ್ರವಣ ಭಕ್ತಿಯ ಕಥೆಯ -
ನೊಂದು ದಿನ ತಾನೋದಿ ಮುಗ್ಧನಾದಂ
ಬಂದ ನಾಟಕವದನು ತಿರುತಿರುಗಿ ನೋಡಿದನು
ನಿಂದುದ್ಧೈ ಭಕ್ತಿಯದು ತಾಯಿತಂದೆಗಳೊಳ್ ॥108॥

ರಾಜಕೋಟೆಗೆ ಬಂದುದೊಂದು ನಾಟಕ ಸಭೆಯು
ತಾ ಹರಿಶ್ಚಂದ್ರನಾದೃಶ್ಯವನು ಕಂಡು
ಕಣ್ಣೀರು ಸುರಿಸಿದನು ಮನವ ಸೆಳೆಯಿತು ದೃಶ್ಯ-
ವೆಷ್ಟು ಸಲ ನೋಡಿದರು ತೃಪ್ತಿಯಿಲ್ಲವಗೆ ॥109॥

ಅದು ಮೊದಲು ದಿನದಿನವು ಮನದಲ್ಲಿ ಕಾಣುವಂ
ಸತ್ಯ ನಿಧಿಯಾ ಹರಿಶ್ಚಂದ್ರ ಭೂಪನನು
ಅವನಂತೆ ತಾನಾಗ ಬೇಕೆಂಬ ಮನವಾಯ್ತು
ಅಂದಿನಿಂ ನೆಲೆಯಾಯ್ತು ಸತ್ಯ ಮನದೊಳಗೆ ॥110॥

ಶಿಕ್ಷಣದ ನಿಯಮಗಳ ತಪ್ಪದಲೆ ಪಾಲಿಪನು
ದಕ್ಷನೆನೆ ವಿದ್ಯಾರ್ಥಿ ವೇತನವ ಪಡೆದು
ಶಿಕ್ಷೆಯನು ಸಹಿಸನಲೆ ಹಿಂದುಳಿದು ಪಾಠದಲಿ
ಶಿಕ್ಷೆಯಾಯಿತ್ತವಗೆ ವ್ಯಾಯಾಮವೊಂದೆ ॥111॥

ಪಾಠಶಾಲೆಗಳಿಹುದು ಪಾಠಗಳ ಕಲಿಯಲ್ಕೆ
ಆಟಪಾಟಗಳೇಕೆ ತನಗೆನುತೆ ಗಾಂಧಿ
ಕೂಟದಲಿ ಸೇರದಿರೆ ತಂದೆಯನು ಸೇವಿಸುವ
ಮಾಟದಿಂ ಕಾಟವನು ದೂರ ಮಾಡಿದನು ||112||

ಶಾಲೆಯನು ಪರಿಕಿಸಲು ವೀಕ್ಷಾಧಿ ಕಾರಿಗಳು
ಗೈಲ್ಸೆಂಬ ಮಹನೀಯರಂದು ಬಂದಿರಲು
ಬಾಲಕರಿಗೈದು ನುಡಿಗಳನು ಬರೆಯಲು ಕೊಡಲು
ಶಾಲೆಯಲಿ ಮೋಹನನೆ ತಪ್ಪು ಬರೆದವನು ||113||

ನೆರೆಯವನ ನೋಡಿನೀ ತಿದ್ದಿ ಬರೆಯೆಂಬುದನು
ಕೆರದ ತುದಿಯಿಂ ತಿವಿದು ಗುರು ಸೂಚಿಸಲ್ಕೆ
ಬರಿದೆ ನೊಂದನು ನ್ಯಾಯದೂರವಿದು ಯೆಂದೆನುತೆ
ಬರೆಯದಾದನು ಕದ್ದು ಸತ್ಯಮೋಹನನು ||114||

ಕಡೆಗಣಿಸಿ ಗುರುಗಳಲಿ ಕುಂದುಗಳನೆಣಿಸತಾ
ಬಿಡದೆ ಪಾಲಿಪನವನು ಗುರುವಿನಾಣತಿಯಂ
ಜಡನಲ್ಲವತಿಬುದ್ಧಿಶಾಲಿಯೂ ತಾನಲ್ಲ
ನಡತೆಯೇ ಸರ್ವಸ್ವ ಸತ್ಯ ಚರಿತನಿಗೆ ||115||

ಒಂದರಿಂ ಮತ್ತೊಂದು ದೋಷ ಹಬ್ಬುತಲಿರಲು
ನೊಂದು ಚಿಂತಿಸಿ ಮನದೊಳೆಚ್ಚೆತ್ತನಾಗ
ತಂದೆಯನು ವಂಚಿಸಿದ ಪಾಪಿ ತಾನಾದೆನಲೆ
ಸಂದುದೇ ಪಿತೃಭಕ್ತಿ ಸತ್ಯನಿಂದುದೆ ಹಾ ॥124॥

ಬಿಳಿಯರನು ಗೆಲಲೆಂದು ತಿನಲು ತೊಡಗಿದೆನು ಗಡ
ಚೆಲುವು ಮನ ಕೆಂದೆನುತೆ ಧೂಮಪಾನದಲಿ
ಮುಳಿದುದೇ ವಿಧಿಯೆನಗೆ ಬುದ್ಧಿಯನು ಮೋಹಿಸುತೆ
ನಿಲುವೆನೇ ಸತ್ಯದಿದಿರಲಿ ಕೆಟ್ಟೆನಯ್ಯೋ ॥125॥

ಬಲು ಹಲುಬಿ ಕಡು ನೊಂದು ಗಡಗಡನೆ ನಡುಗಿದನು
ನಿಲದೆ ದೂಡಿದನೆಲ್ಲ ದುಶ್ಚಟವ ಮನದಿಂ
ಕೆಳೆಯ ವೇಷದ ಶತ್ರುವನು ದೂರ ಸರಿಸಿದನು
ಖಲನೆನಗೆ ಶಿಕ್ಷೆಯೇನೆಂದು ಮರುಗಿದನು ॥126॥

ತಂದೆಗಿದ ತಿಳಿಸುವೆನೆ ನುಡಿವ ಧೈರ್ಯವದಿಲ್ಲ-
ವೆಂದು ತಾ ಮಾಡಿರುವ ಪಾಪಗಳನೆಲ್ಲ
ಒಂದನೂ ಬಿಡದೆ ತಾ ಬರೆದು ಶಿಕ್ಷೆಯ ಬೇಡಿ
ತಂದಿತ್ತ ಪತ್ರವನು ತಂದೆಯಡಿಗಳಿಗೆ ॥127॥

ಪಾಠಶಾಲೆಗಳಿಹುದು ಪಾಠಗಳ ಕಲಿಯಲ್ಕೆ
ಆಟಪಾಟಗಳೇಕೆ ತನಗೆನುತೆ ಗಾಂಧಿ
ಕೂಟದಲಿ ಸೇರದಿರೆ ತಂದೆಯನು ಸೇವಿಸುವ
ಮಾಟದಿಂ ಕಾಟವನು ದೂರ ಮಾಡಿದನು ||112||

ಶಾಲೆಯನು ಪರಿಕಿಸಲು ವೀಕ್ಷಾಧಿ ಕಾರಿಗಳು
ಗೈಲ್ಸೆಂಬ ಮಹನೀಯರಂದು ಬಂದಿರಲು
ಬಾಲಕರಿಗೈದು ನುಡಿಗಳನು ಬರೆಯಲು ಕೊಡಲು
ಶಾಲೆಯಲಿ ಮೋಹನನೆ ತಪ್ಪು ಬರೆದವನು ||113||

ನೆರೆಯವನ ನೋಡಿನೀ ತಿದ್ದಿ ಬರೆಯೆಂಬುದನು
ಕೆರದ ತುದಿಯಿಂ ತಿವಿದು ಗುರು ಸೂಚಿಸಲ್ಕೆ
ಬರಿದೆ ನೊಂದನು ನ್ಯಾಯದೂರವಿದು ಯೆಂದೆನುತೆ
ಬರೆಯದಾದನು ಕದ್ದು ಸತ್ಯಮೋಹನನು ||114||

ಕಡೆಗಣಿಸಿ ಗುರುಗಳಲಿ ಕುಂದುಗಳನೆಣಿಸತಾ
ಬಿಡದೆ ಪಾಲಿಪನವನು ಗುರುವಿನಾಣತಿಯಂ
ಜಡನಲ್ಲವತಿಬುದ್ಧಿಶಾಲಿಯೂ ತಾನಲ್ಲ
ನಡತೆಯೇ ಸರ್ವಸ್ವ ಸತ್ಯ ಚರಿತನಿಗೆ ||115||

ಶ್ರೀ

॥ ಕಸ್ತೂರಿ ಕಲ್ಯಾಣಂ ॥

ಸೂಚನೆ॥ ಮಾಟ ಚಿನ್ನದ ಗೊಂಬೆಯದು ಘನ
ಕೂಟ ಕಸ್ತೂರಿಯ ಸುಗಂಧದ
ಲಾಟವೆನೆ ಭಾಮಿನಿಯ ನೊಲಿದನು ಕೃಷ್ಣ ಕೇಳೆಂದ ॥

ಕೇಳು ಕೃಷ್ಣ ಕುಮಾರ ಮೋಹನ
ಗೇಳನೆಯ ವರುಷದಲಿ ಮದುವೆಯ
ಲೀಲೆಗಾಯಿತು ನಿಶ್ಚಯವು ತಾ ಮೂರನೆಯ ಬಾರಿ ।
ಬಾಲ ತೊಟ್ಟಿಲೊಳಿರಲದೀರ್ವರ
ಪಾಳಿ ಮುಗಿದುದು ದೈವ ತೆರೆದುದು
ಬಾಲ ಮೋಹನನನ್ನು ಗೋಕುಲದಾಸ ಮೆಚ್ಚಿದನು ॥1॥

ಸತಿಗೆ ಮದುವೆಯೆ ಲೀಲೆ ಗಡ ಸಂ
ಗಾತಿಯೋರ್ವನು ಬಪ್ಪನಾಟಕೆ
ಪತಿಯೆನುತೆ ಕುಣಿದಾಡಿದಳು ತಾ ಕುವರಿ ಕಸ್ತೂರಿ ।
ಪತಿಯು ಮೋಹನ ಬಾಲ ನಿನ್ನಯ
ಪತಿ ದಿವಾನರ ಸುತನು ಪುಣ್ಯದ
ತತಿಯ ಫಲವೆನಲೊಲಿದು ನಲಿದಳು ಮುದ್ದು ಕಸ್ತೂರಿ ॥2॥

ಕರ್ಮಚಂದನು ತನ್ನ ಮನದಲಿ
ನಿರ್ಮಲಾತ್ಮನು ಮಿತ್ರ ಗೋಕುಲ
ಧರ್ಮಭೀರುವು ಧನಿಕ ಬೀಗತನಕ್ಕೆ ಸಮನೆನಲು ।
ಧರ್ಮ ಕರ್ಮದ ಯೋಗ ವಿದು ತಾ

ನೆಮ್ಮಗೆಳೆತನ ನಿತ್ಯವಾಯಿತು
ನಮ್ಮಪುಣ್ಯವಿದೆಂದು ಗೋಕುಲದಾಸ ಚಿಂತಿಸಿದ ||3||
ಅತ್ತೆ ಧೀರಜ ಕುವರಿ ಬಾ ತಾ
ನಿತ್ತ ತನ್ನಯ ಮಗಳ ಭಾಗ್ಯವ
ಚಿತ್ತದಲಿ ತೂಗಿದಳು ಮಂತ್ರಿಕುಮಾರನೀತನಲೆ ।
ಮತ್ತಿವನು ತಾನಹ ದಿವಾನನು
ತೊತ್ತುಗಳು ಸೇವೆಯಲಿ ಸಲುವರು
ವಿತ್ತದೈಸಿರಿಯಾಗಿ ಮೆರೆವಳು ತನ್ನ ಮಗಳೆನುತೆ ||4||

ಅಂದು ತೊಟ್ಟಿಲೊಳಿರಲು ಬಾಲರು
ತಂದೆ ತಾಯ್ಗಳು ಮಾತ ಕುಡುವರು
ಚಂದ್ರವಲೆ ತಾ ಗೊಂಬೆಯಾಟವಿದೆನಲು ಸಡಗರದಿ
ಕಂದಗಳು ಕಿಲ ಕಿಲನೆ ನಗಲ್ಕೆ
ತಂದು ನೋಡಿರೊ ಮದುವೆಯೆನಲಾ
ನಂದ ಮಕ್ಕಳಿಗೆನುತೆ ಕೈ ಕಟ್ಟುವರು ಗಹಗಹಿಸಿ ||5||

ಭಾನುವಾರವು ಬರಲು ಮಕ್ಕಳ
ದೇನು ಸಡಗರವಂದು ಹರ್ಷದಿ
ತಾನು ಮೇರೆಯ ಮೀರೆ ನಲಿವರದೊಂದೆಡೆಗೆ ಸೇರಿ
ತಾನು ಪತಿಯಹ ನಿಂದು ಬರುವನು
ಮಾನಿನಿಯ ತಾ ನೋಳ್ಪೆ ನೆನ್ನುತೆ
ಸಾನು ರಾಗದಿ ಬಾಲೆ ಕತ್ತುರಿ ಗಾಂಧಿ ಯೋಡುವಳು ||6||

ಕಣ್ಣು ಮುಚ್ಚಾಲೆಯಲಿ ಮೋಹನ
ನಿನ್ನು ಕಳ್ಳನೆನಲ್ಕೆ ನೆಗೆವಳು
ಕಣ್ಣುಮಗುಚಿದ ಕರುವು ತಾನೆನೆ ಬೆರಳಲೇಡಿಸುತೆ ।
ತನ್ನ ಹಕ್ಕಿಯ ಹಿಡಿಯಲಾಗದೆ
ಖಿನ್ನನಾಗಲು ಚೆನ್ನ ಮೋಹನ
ನಿನ್ನು ಬಳಲಿದೆ ನೆನುವವೋಲ್ ತಾ ಕೈಗೆ ಸಿಕ್ಕುವಳು ॥7॥

ಬಾಲ ಲೀಲೆಯೊಳಿಂತು ಸವೆದುದು
ಕಾಲ ಗೋಕುಲ ದಾಸ ಮುದದಲಿ
ಬಾಲೆಯನು ತಾ ಧಾರೆಯೆರೆಯಲು ಮನದ ನಿಶ್ಚಯವ
ಪೇಳೆ ಸಡಗರ ವೇಳೆ ಪುತಲಿಗೆ
ಬಾಲ ಮೋಹನ ತಾತ ವೇಳೆಯ
ಕೇಳಿ ಜೋಯಿಸರಿಂದ ಬರೆಸಿದ ಲಗ್ನಪತ್ರಿಕೆಯ ॥8॥

ಕರೆಸಿದನು ಬಂಧುಗಳ ನೆಲ್ಲರ
ತರಿಸಿದನು ವರ ರತುನ ನಿಚಯವ
ನಿರಿಸದನು ಫಲಪುಷ್ಪದೋಜೆಯಲಖಿಲಮಂಗಳವ ।
ಬರಿಸಿ ಮೌಹೂರ್ತಿಕರ ಸುದಿನವ
ನರಸಿ ಶುಭಲಗ್ನವ ನಿರಿಸಿ ತಾ
ಬರೆಸಿದನು ಸಂಭ್ರಮದಿ ಗೋಕುಲದಾಸ ಪತ್ರಿಕೆಯ ॥9॥

ಕುವರಿಯನು ನಾನಿತ್ತೆ ನಿಮ್ಮಯ
ಕುವರನಿಗೆ ಮುದದಿಂದೆ ವಾಚಾ
ಇವಳನವಲೋಕನದ ವಿಧಿಯಿಂ ಸ್ವೀಕರಿಸಿರೆನುತೆ ।
ಸು ವಿಹಿತದೊಳಾ ವಸ್ತ್ರ ಭೂಷಣ
ನಿವಹದೊಂದಿಗೆ ಪುಷ್ಪ ಫಲವೈ
ಭವವಿರಲು ಗೋಕುಲನು ಕೊಟ್ಟನು ಲಗ್ನ ಪತ್ರಿಕೆಯ ॥10॥

ಕುವರಿಯನು ನೀವಿತ್ತಿರೆಮ್ಮಯ
ಕುವರನಿಗೆ ಸ್ವೀಕರಿಸಿದೆವು ನಾ
ವುವರನವಲೋಕನದಿ ನೆಮ್ಮದಿ ತಾಳಿ ನೀವಿಂದು ।
ಇವಳ ಪೋಷಣೆ ನಮ್ಮದಾಯಿ
ತ್ತ ವಿರತವು ಚಿತ್ತ ವಿಡಿರೆನ್ನುತೆ
ವಿವಿಧ ದುಡುಗರೆಯೊಡನೆ ಪತ್ರಿಕೆಯಿತ್ತನಾಗ ಕ ಬಾ ॥11॥

ಬಳಿಕ ಕೇಳಾ ಗೋಕುಲನು ತಾ
ನೊಲಿದು ಬಂಧುಗಳೆಲ್ಲರನು ಬಹು
ಕಳಕಳಿಯ ಲಾದರಿಸಿದನು ಭಕ್ಷ್ಯಾದಿ ನಿವಹದಲಿ ।
ಅಳತೆಯಿಲ್ಲದ ವೈಭವದಿ ತಾ
ನಿಳೆಗಿಳಿದ ವೈಶ್ರವಣನೆನೆ ಮಗ
ಳಲಿ ತನಗಿರುವ ಮಮತೆಗಿದು ಸರಿಯೆನಲು ಬಂಧುಗಳು ॥12॥

ಸೇರಿದರು ಬಂಧುಗಳು ಶುಭಸಂ
ಭಾರಗಳ ನಣಿಗೊಳಿಸೆ ತಮ್ಮಯ
ದೂರ ದೂರದ ನಂಟನಂಟಿಸುತವ ರೊಳೊಂದಾಗಿ
ದೂರವೇನಾ? ಧೀರಜಳ ಪುರ
ನಾರಿಯೋರ್ವಳ ನೆನ್ನ ಗೆಳೆಯಗೆ
ಧಾರೆಯೆರೆದಿಹರೆಂದು ಬಂಧುತ್ವವನು ಕಲ್ಪಿಸುತೆ ||13||

ಇತ್ತ ಕತ್ತುರಿಯಣ್ಣ ಮಾಧವ
ನುತ್ತಮೋತ್ತಮ ಶಿಲ್ಪಿಗಳ ಕರೆ
ಸುತ್ತೆ ವೈವಾಹಿಕದ ಮಂಟಪ ರಚನೆಯಲಿ ನಿಲಿಸೆ ।
ಎತ್ತಿದರು ಸಮ ಚೌಕದಲಿ ಬಹು
ಬಿತ್ತರದ ಚಪ್ಪರವ ಬಹು ವಿಧ
ಕೆತ್ತನೆಯ ಕಂಬಗಳ ಸಾಲಲಿ ರಾಮಣೀಯಕವ ||14||

ನಡುವೆ ವಿವಿಧದ ವಜ್ರ ಫಲಕದ
ಗಡಣಗಳ ಗಟ್ಟಣೆಯ ಗಾಡಿಯ
ಲಡಿಗಡಿಗೆ ನಡುನಡುವೆ ವಜ್ರದ ಗುಡಿಗಳನು ಜಡಿಯೆ
ಮೃಡನ ಸಖ ನೈಸಿರಿಯ ಮೆಟ್ಟುತೆ
ಲಡಿಯೆನಿಸೆ ಸೌಧರ್ಮ ಶೋಭೆಯ
ಗಡಿಯು ಸೊಬಗಿಗಿದೆನಲು ಸೊಗಸಿತು ಲಗ್ನವೇದಿಕೆಯು
||15||

ತಳಿರು ತೋರಣ ವೆತ್ತ ನೋಡಲು
ಸುಳಿವ ಬಾಳೆಯ ಕಂಬಗಳು ಥಳ
ಥಳಿಪ ಮಣಿದೀಪಗಳ ಪಜ್ಜೆಗಳೆಸೆಯೆ ತಳ್ಳಿಕ್ಕಿ ।
ಇಳೆಯ ಸಿರಿಯೋಲಗವೊ ಶುಭಸಂ
ಕುಳದಳುಂಬದ ನಿಲುಗಡೆಯೊ ಬಲಿ
ನಿಳಯದರಮನೆಯೆನಲು ರಂಜಿಸಿತಂದು ಮಂಟಪವು
॥16॥

ಅತ್ತ ಮೋಹನ ಪಿತನು ತನ್ನಯ
ಚಿತ್ತದಲಿ ಯೋಚಿಸುತೆ ಮದುವೆಗೆ
ವಿತ್ತರಾಶಿಯು ಕರಗುವುದು ಸಹಜವಿದು ಭಾವಿಸಲು
ಮತ್ತಿತರ ಮಕ್ಕಳಿಗು ಮಂಗಳ
ವೆತ್ತ ಲಲ್ಪ ವ್ಯಯವು ಸಲುವುದೆ
ನುತ್ತೆ ನಿಶ್ಚಯಿಸಿದನು ಲಗ್ನವ ನಣ್ಣಗಳ ಜೊತೆಗೆ ॥17॥

ಮದುವೆಯೆನೆ ಸುಮ್ಮನೆಯೆ ಸಿದ್ಧತೆ
ಗದುವೆ ತೊಡಗಿದರೆಲ್ಲ ಬಂಧುಗ
ಳೆದುರು ತಂದೊಟ್ಟಿದರು ಜವಳಿಯ ರಾಶಿ ರಾಶಿಗಳ
ಇದುವರೆಗೆ ಕನ್ಯೆಗಿದು ಬೀಗಿತಿ
ಗಿದು ವಧುವಿನಣ್ಣನಿಗೆ ಮಾವನಿ
ಗಿದುವೆ ಧಾರೆಯ ಸೀರೆ ನಾಗೋಲಿಯದು ತಾನಿದೆನೆ
॥18॥

ಬಂಧುಗಳ ಗಣನೆಯದು ನಿಲುಕದು
ಯೆಂದು ಅಂಗಡಿಯೊಂದ ಹೇರಿಸಿ
ತಂದು ಮತ್ತೊಂದಂಗಡಿಯು ತಾ ಮಿತ್ರ ವರ್ಗಕೆನೆ ।
ಕುಂದು ಬಾರದ ತೆರದಿ ದಾಸೀ
ವೃಂದಕಿದು ಸರಿಯೆನಲು ಮುದದಿಂ
ದೊಂದು ಬಂಡಿಯ ತುಂಬಿ ತರಿಸಲು ತುಂಬಿ ತುಗ್ರಾಣ
||19||

ಅಡಿವಿಡಿದು ಮುಡಿವರೆಗೆ ತಾವಿ
ಲ್ಲಿಡಲೆನುವ ಮೋಡಿಯಲಿ ತಂದರು
ತೊಡಿಗೆಗಳ ನವರತ್ನ ಖಚಿತದ ಗಾಡಿ ಮೆರೆಯುತಿರೆ
ಜಡಿದ ವಜ್ರದ ಜಡಪು ಕಂಗಳ
ತೊಡಕುತಿರೆ ಜನ ನೋಡಿ ದಣಿಯದು
ತೊಡಹುಗಳ ತೋರುವುದೆ ಸಂಭ್ರಮವಾಯ್ತು ಧೀರಜೆಗೆ
||20||

ರಾಜಕಾರಿಯವಿರಲು ಮಂತ್ರಿಯ
ರಾಜಕೋಟೆಯ ಬಿಡಲದೊಪ್ಪುದೆ
ರಾಜ ಠಾಕೂರನು ನಿಲಿಸೆ ಮದುವೆ ಸನಿಯ ವಾಯ್ತು
ವಾಜಿಗಳವಲ್ಲಲ್ಲಿ ನಿಲೆ ಕಾಂ
ಭೋಜಗಳು ಬದಲಿಸುತೆ ಬಂದನು
ರಾಜ ತೇಜದಿ ಮೂರು ದಿನದಲಿ ಪೋರಬಂದರಿಗೆ ||21||

ಮುಂದೆ ಮಂಗಳ ವಾದ್ಯ ಮೊಳಗಲು
ಹಿಂದೆ ಮದ್ದಿನ ಜಾಣರಂಜದೆ
ಚಂದದಿಂ ಹತ್ತಿಸುತೆ ಹಾರಿಸೆ ಬಿರುಸು ಬಾಣಗಳ ।
ಬಂಧುಗಳ ಸಂದಣಿಯು ಸಡಗರ
ದಿಂದ ಸಾಗರ ದಂದವೆತ್ತಿರೆ
ಮಂದ ಗಮನದಿ ಮೋಹನನ ದಿಬ್ಬಣವು ಮೆರೆದತ್ತು
||22||

ಸುದತಿಯರು ಚೀನಾಂಬರವ ಧರಿ
ಸಿದರು ಪರಿಮಳ ಪುಷ್ಪ ಮಾಲೆಯ
ಮುದದಿ ಮುಡಿದರು ನಡೆದರಂದದಿ ದಿಬ್ಬಣದ ಜೊತೆಗೆ
ಉದಿತ ನವಯೌವನದ ಭರದಲಿ
ವಿಧುವದನೆ ಮೋಹನನ ಸೋದರಿ
ಹದುಳದಲಿ ಕನ್ನಡಿಯ ಕಳಸವ ಪಿಡಿದು ನಡೆಸಿದಳು
||23||

ಪೋರ ಬಂದರನಂದು ಬಲವಂ
ದೂರ ಬರುತಿರೆ ದಿಬ್ಬಣವು ಮುದ
ವೇರಿ ಗೋಕುಲ ನಿದಿರು ಗೊಂಡಾದರಿಸಿ ಬೀಗರನು
ಹಾರ ದಿಂ ಶೋಭಿಸಲು ವರ ಶುಭ-
ಹೋರೆಯಲಿ ರಣ ಛೋಡನಾಥನಿ
ಗಾರುತಿಯ ಮಾಡುತ್ತೆ ವರನನು ಪೂಜಿಸಿದ ಮುದದಿ
||24||

ವರನ ಪಾದವ ತೊಳೆದು ಧೀರಜೆ
ಯರಸಿ ಮುಳ್ಳನು ಸೂಜಿಯಿಂ ತಾ
ನಿರದೆ ಜಂಬೀರವನು ಲೇಪಿಸಿ ನೋವ ಕಳೆಯಲೆನೆ ।
ಅರಶಿನವ ಹಚ್ಚಿದಳು ಮಂಗಳ
ವರ ವಿಭೂಷಣ ವುಡಿಗೆ ಯಿತ್ತಳು
ಹರಳಿನುಂಗುರ ಕೈಗೆ ಗಡಿಯಾರವದು ರಂಜಿಸಲು ||25||

ಬಳಿಕ ಬೀಗರ ಬಳಲಿಕೆಯ ಪರಿ
ಹರಿಸೆ ಸಕ್ಕರೆಯಿಕ್ಕಿ ಕೇಸರಿ
ಯರೆದು ಮಂದೋಷ್ಣದಲಿ ಕೆನೆವಾಲಿತ್ತು ಕುಡಿಯಲ್ಕೆ
ಕರೆದು ಷಡುರಸ ಭೋಜನವನುರೆ
ಯೆರೆದು ಬೀಗರು ತಣಿಯೆ ನಿಂದುಪ
ಚರಿಸು ತಿರಲಾ ರಾತ್ರಿ ಜಾರಿತದೊಂದು ಚಣದಂತೆ ।
||26||

ಬೆಳಗು ಮಂಗಳದೋಲಗವು ತಾ
ಮೊಳಗೆ ಮುತ್ತೈದೆಯರು ಭಕ್ತಿಯ
ಲಿಲಿಯ ನೇರಿದ ಬೆನಕನನು ಪೂಜಿಸುತೆ ಸಡಗರದಿ ।
ಬಳಿಕ ಮಕ್ಷತ ವೀಳಯದ ವಿಧಿ
ಯಲಿವಧೂವರರೀರ್ವರಿಗುಮಂ
ಗಳದ ಮಜ್ಜನ ವಿಧಿಯ ನೆರವೇರಿಸಿದ ರಂದದಲಿ
||27||

ನಾಂದಿಯನು ಮಾಡಿದರು ಶೋಭನ
ವೆಂದು ನುಡಿಯೆ ಪುರೋಹಿತರು ತಾ
ನಿಂದು ಗೋದಾನವನು ಮಾಡಿದ ಮೋಹನನಿಗೆ ಬಾ
ಚೆಂದದರಿಶಿನದುಡಿಗೆಯಲಿ ಕ
ಣ್ಣಿಂದ ಕಾಡಿಗೆ ಶಿರಕೆ ಪೇಟವ
ನಂದು ಧರಿಸಿದ ದಂಡ ಛತ್ರವ ಕಾಲ್ಗೆ ಪಾದುಕೆಯ ||28||

ಕಾಶಿಗೆನೆ ಹೊರಟಿರಲು ಮೋಹನ
ವೇಷದಲಿ ಗೋಕುಲನು ಬಂದನು
ನಾ ಸುಕನ್ಯೆಯ ನೀವೆ ಜೊತೆಯಲೆ ಹೋಗಬಹುದೆಂದ|
ವೇಷವಲ್ಲವೆ ಮೋಹನನು ತಾ
ಘಾಸಿಯಾದನು ತನ್ನ ಮನದಲಿ
ತಾಸು ಕಳೆವುದದೆಂತು ಮೌಹೂರ್ತಿಕರ ದೂಷಿಸಿದ
||29||

ವರನು ಪಲ್ಲಕ್ಕಿಯಲಿ ಕುಳಿತ್ತೈ
ತರಲು ಪಲ್ಲಕ್ಕಿಯಲೆ ಕನ್ಯೆಯ
ಕರೆದು ತಂದರು ನೋಡಲಂತಃಪಟವು ಮರೆಯಾಗೇ
ಪರಿಪರಿಯಲಿಣಿಕಿದರು ಕಾಣದೆ
ಪಿಳಪಿಳನೆ ಕಣ್ಬಿಡುತ ಕೃಷ್ಣನ
ಮರೆಯ ಹೊಕ್ಕರು ದೇವ ತೋರ್ರೈ ಜೀವಿತದ ಜೊತೆಯ
||30||

ಎನಲು ತೆರೆಯೊಡ್ಡಿರಲು ವಾದ್ಯ
ಧ್ವನಿಯು ಗುಡುಗಲು ಲಾಜದಕ್ಷತೆ
ಹನಿಯೆನಲು ಮಳೆ ಸುರಿದು ಸರಿಯಿತು ತೆರೆಯ ಮರೆಯಿರದೆ।
ಜನರ ಸಡಗರ ಮೇರೆ ಮೀರಿ
ತ್ರಿನನ ಕಂಡರಳಿತ್ತು ಕನ್ಯಾ
ನನ ಕಮಲ ಕೊನರೇರಿ ತಾಸೆಯ ಬಳ್ಳಿ ಮೋಹನನ ||31||

ವರನಿಗೆ ವಧುವು ವಧುವಿಗೆ ವರನು
ವರಣ ಮಾಲೆಯ ತೊಡಿಸಿದರು ಬಲು
ಹರುಷದಲಿ ಲಜ್ಜೆಯಲಿ ದಿಟ್ಟಿಸು ತೋರೆ ನೋಟದಲಿ
ಇರದೆ ಹರುಷೋತ್ಕರಕೆ ಪುಳಕವು
ನೆರೆಯ ಹೃದಯದಲಾವುದೋತೆರ
ದರಮೆಯೂಡಿದ ಮಧುರ ಭಾವನೆ ಹಿತದಿ ಮೂಡಿತ್ತು
||32||

ಧಾರೆ ಮಂಟಪಕ್ಕೆ ತರಲು ಶುಭ
ವೇಳೆಯಲಿ ವಿಪ್ರೋತ್ತಮರು ಘನ
ತಾರದಲಿ ತಾವು ಭಯ ಗೋತ್ರ ಪ್ರವರವನು ನುಡಿಯೆ।
ಕೇಳಿ ಬಂಧುಗಳೆಲ್ಲ ಸರಿಯೆನೆ
ತಾಳಿ ಮುದವನು ಧೀರಜೆಯುತಾ
ಧಾರೆಯೆರೆದಳು ಗಂಗೆಯುದಕದಿ ತುಳಸಿದಳವಿಟ್ಟು ||33||

ಪ್ರವರ

ಸತ್ಯಾಯುಧ, ದೀನಕಾರುಣ್ಯ ಶ್ರುತಶ್ರಮಣ ತ್ರಯಾರ್ಷೇಯ
ಪ್ರವರಾನ್ವಿತ ಸತ್ಯಗೋತ್ರೋದ್ಭವಾಯ
ಉತ್ತಮ ಚಂದ್ರ ಗಾಂಧಿನಃ ಪ್ರಪೌತ್ರಾಯ
ಕರ್ಮಚಂದ್ರ ಗಾಂಧಿನಃ ಪೌತ್ರಾಯ
ಕರ್ಮಚಂದ್ರ ಗಾಂಧಿನಃ ಪುತ್ರಾಯ
ಮೋಹನದಾಸ ಗಾಂಧಿನೇ ವರಾಯ ಶ್ರೀಧರ ರೂಪಾಯ
ಧರ್ಮಪ್ರಜಾ ಸಂಪತ್ತ್ಯರ್ಥಮಿಮಾಂ ಕನ್ಯಾಂ ವೃಣೀಮಹೇ॥

ನಿಧಿಗೋಪ, ವೈಶ್ರವಣ, ಕಿನ್ನರೇಶ ತ್ರಯಾರ್ಷೇಯ ಪ್ರವರಾನ್ವಿತ
ಶ್ರೀವತ್ಸ ಗೋತ್ರೋದ್ಭವಾಂ
ಮಾಧವ ದಾಸ ಮಕಾಂಜಿನಃ ಪೌತ್ರೀಂ
ಗೋಕುಲ ದಾಸ ಮಕಾಂಜಿನಃ ಪುತ್ರೀಂ
ಕಸ್ತೂರೀ ನಾಮ್ನೀಂ ಕನ್ಯಾಂ ಶ್ರೀರೂಪಾಂ ಧರ್ಮಪ್ರಜಾ
ಸಂಪತ್ತ್ಯರ್ಥಮಿಮಾಂ ಕನ್ಯಾಂ ವೃಣೀಧ್ವಂ ॥
ಕನ್ಯಾಪಿತೃ ॥
ಧರ್ಮೇಚ ಅರ್ಥೇಚ ಕಾಮೇಚ ಇಯಂ ನಾತಿ ಚರಿತವ್ಯಾ

ವರ ॥

ಧರ್ಮೇ ಚ ಅರ್ಥೇ ಚ ಕಾಮೇಚ ಇಮಾಂ ನಾತಿ ಚರಾಮಿ॥
ತಾನು ಕನ್ಯಾದಾನ ಫಲ ಸಾ
ದ್ಗುಣ್ಯ ಸಾಧನೆಗಾಗಿ ವಿಧಿಯಿಂ
ದಗ್ನಿ ಸಾಕ್ಷಿಕವಾಗಿ ಮಧುಪರ್ಕವನು ಮಾಡಿದನು ।
ತನ್ನ ವೈಭವ ಕಿನ್ನು ಸರಿಯೆನೆ
ರನ್ನ ದುಂಗುರ ವಜ್ರಮಾಣಿಕ
ವನ್ನು ಬೆಳ್ಳಿಯ ತಟ್ಟೆಯಲಿ ತುಂಬಿತ್ತನುಡುಗರೆಯ ॥34॥

ಏಳು ಹೆಜ್ಜೆಯ ಹಿಡಿದು ನಡೆಸಿದ
ನಾ ಲತಾಂಗಿಯ ತಾನು ಮೋಹನ
ಬಾಲ ಹಿರಿಯರು ಸಖ್ಯ ಸಾಪ್ತಪದೀನವೆನ್ನುವರು ।
ಕೇಳು ಮೋಹನ ವಿಪ್ರರಾಶಿಷ
ಮೇಳವಿಸೆ ಶುಭಲಗ್ನ ಮೊಂದಿರೆ
ಬಾಳ ಕುರುಹನು ಕಟ್ಟಿದನು ಮಾಂಗಲ್ಯವನು ಸತಿಗೆ
॥35॥

ಅಂದು ಮದು ಮಕ್ಕಳಿಗೆ ಭೂಮವು
ಸಂದುದಲೆ ಕಸ್ತೂರಿ ಗಿಷ್ಟವಿ
ದೆಂದು ತೋರಲು ಬಾಯಿ ಬಿಡದಲೆ ನುಂಗಿದಳು ಜಾಣೆ ।
ಸಂದ ಭಕ್ಷ್ಯಾವಳಿಯ ಜೊತೆಯಲಿ
ತಂದ ಕತ್ತುರಿ ಕೈಗಳನು ಸಾ
ನಂದದಿಂ ಕಚ್ಚಿದನು ತಾ ಬಲು ತುಂಟ ಮೋಹನನು ॥36॥

ಬಳಿಕ ಕತ್ತುರಿ ಮೋಹನರು ತಾ
ವುರುಟಣೆಯ ಮಾಡಿದರು ಮಂಗಲ
ಕರಿಶಿನವು ಕುರುಹೆಂದು ತೊಡೆದರು ಲಜ್ಜೆಯನು ಬೆರಸಿ।
ತಿಲಕವನು ತಿದ್ದಿದರು ಹಾರವ
ತೊಡಿಸಿದರು ಗಂಧವನು ಪೂಸುತೆ
ಕರುಪುರದ ವೀಳಯವ ನಿತ್ತಾರತಿಯ ಬೆಳಗಿದರು ॥37॥

ಪತಿಯ ಹೆಸರನು ಕೇಳೆ ಕತ್ತುರಿ
ಯತಿ ಮಧುರ ಭಾವದಲಿ ನಾಚುತೆ
ನತಶಿರಳು ಕೊಂಕಿಸುತೆ ಕೊರಳನು ಕರೆದು ಧೈರ್ಯವನು।
ಗತಿಯ ಕಾಣದೆ ತುಟಿಯ ನಲುಗಿಸಿ
ಸತಿಯು 'ಮೋ' ಎನೆ ಮಂದರವದಲಿ
ಪತಿಯ ಕಂಡಳು ನಿಂತುದುಳಿದಕ್ಕರವು ಹೃದಯದಲೆ
॥38॥

ಕೇಳು ಕೃಷ್ಣ ವಿನೋದ ಕೂಟದ
ಲೀಲೆಯಲಿ ಸತಿಪತಿಗಳಿಬ್ಬರು
ಪಾಳಿಯಲಿ ಗುಬ್ಬಚ್ಚಿ ಕಟ್ಟಲು ವೃದ್ಧ ದಂಪತಿಗಳ್ ।
ತಾಳಿದುತ್ಸಾಹದಲಿ ನೆನೆದರು
ತಾಳಿ ಕಟ್ಟಿದ ದಿನವ ರಸಿಕತೆ
ಯೇಳಲೊಬ್ಬರಿ ಗೊಬ್ಬರತಿ ಸಂಭ್ರಮದಿ ಕಟ್ಟಿದರು ॥39॥

ಇಂತು ವೈವಾಹಿಕದ ಸಂಭ್ರಮ
ಕಾಂತೆ ಕಾಂತರೊಳನು ಪಮದಮುಖ
ಕಾಂತಿಯಂ ಪೆರ್ಚಿಸುತೆ ಮೆರೆದುದು ಸಿರಿಯ ನರ್ತನದೆ।
ಕಂತುವಿನ ಬಾಣಂಗಳಿಸುಗೆಯಿ
ನಂತರಂಗವು ತುದಿಯೆ ಮೋಹನ
ನೆಂತು ಸೈರಿಸಲರಿಯದಲೆ ನೋಡುವನು ಕತ್ತುರಿಯ
॥40॥

ಪತಿಯ ದಿಟ್ಟಿಯು ತಾಗಿ ಭಾವದ
ಗತಿಯ ಕಂಡೋಡುವಳು ನಾಚುತೆ
ಸುತನು ಕತ್ತುರಿ ಹರಿಣಿಯಂದದಿ ತಾಯಿಯಿದ್ದೆಡೆಗೆ ।
ಸುತೆಯ ಮುಖರಾಗವನು ಕಾಣುತ
ಲತಿ ಚತುರೆ ಧೀರಜೆಯು ನಗುತಲಿ
ಪತಿಗೆ ಹಾಲನು ಕೊಟ್ಟು ಬಾರೆಂದಟ್ಟುವಳು ನೆಪದಿ
॥41॥

ಹಿರಿಯರಾಣತಿ ಮೀರಲುಂಟೇ
ಸರಿದು ಧೀರಜಕುವರಿ ಧೈರ್ಯದಿ
ಬರಲು ಮೆಲ್ಲಡಿಯಿಡುತೆ ಮೈಲಿಗೆ ದಿನದ ವೇಗದಲಿ
ಕರವು ಕಂಪಿಸಿ ಹೃದಯದೊಂದಿಗೆ
ಕರಗಿ ಧೈರ್ಯವು ಕಂಡು ಮೋಹನ
ನಿರವ ಚಿಮ್ಮಿತ್ರು ರಾಗ ಸಿಕ್ಕಳು ಪತಿಯ ತೆಕ್ಕೆಯಲಿ
||42||

ಇಂತು ಕಾಲವು ಕಳೆಯುತಿರೆ ತಾ
ಸಂತಸವು ಮಿಕ್ಕಿರಲು ಮೋಹನ
ಚಿಂತೆಯಿಲ್ಲದೆ ಹಲವು ದಿನವಿರೆ ಶ್ವಶುರ ಗೃಹದಲ್ಲಿ ।
ಅಂತವಿಲ್ಲದ ವೈಭವದ ಬಳುವಳಿ
ಯಾಂತು ಕತ್ತುರಿ ತಾಯನಗಲುವ
ಚಿಂತೆ ಬಾಧಿಸುತಿರಲು ಹೊರಟಳು ಪತಿಯ ಮಂದಿರಕೆ
||43||

ಪತಿಗೃಹಕೆ ತೆರಳುತಿರೆ ಕತ್ತುರಿ
ಮತಿಯುತೆಯು ಧೀರಜೆಯು ಕುವರಿಯ
ನತಿಮಮತೆಯಿಂ ಕರೆದು ಕೂರಿಸಿ ಬುದ್ಧಿಪೇಳಿದಳು ।
ಪತಿಯ ಮನವನು ತಿಳಿದು ನಡೆ ನೀ
ನತಿ ವಿಲಾಸದಿ ಮೆರೆಯದಿರು ದೇ
ವತೆಗಳನು ಭಕುತಿಯಲಿ ಸೇವಿಸು ಶೀಲವತಿಯಾಗು
||44||

ಅತ್ತೆ ಮಾವಂದಿರನು ಸೇವಿಸು
ಮೆತ್ತಗಿರು ಪರಿಜನರ ವಿಷಯದೊ
ಳುತ್ತಮಳು ನೀನೆನಿಸಿ ತೌರಿಗೆ ಕೀರ್ತಿಯನು ತರಿಸು ।
ಮತ್ತೆ ನುಡಿಯದಿರನೃತವನು ನೀ
ನುತ್ತಮರ ಗೌರವಿಸು ಸೇವಕ
ರತ್ತ ಕರುಣೆಯ ತೋರು ಚಿತ್ತದೊಳಿರಲಿ ಸಹನೆಯದು
||45||

ಎಂದು ಬೋಧಿಸಿ ವಿವಿಧ ಬಳುವಳಿ
ಯಿಂದ ಕುವರಿಯ ನಾದರಿಸಿ ಮುದ
ದಿಂದೆ ಕಳುಹಿಸೆ ಪತಿಗೃಹಕೆ ತೆರಳಿದಳು ಕಸ್ತೂರಿ ।
ಸಂದ ಪ್ರೇಮದೊಳಂದು ಮೋಹನ
ನಂದು ತನ್ನಯ ಸತಿಯೊಡನೆ ನಲ
ವಿಂದ ದಿನಗಳ ಕಳೆಯುತಿದ್ದನು ಕೃಷ್ಣ ಕರುಣಿಸಲು
||46||

******

ಶ್ರೀ
ಆಫ್ರಿಕಾನುಭವ

ಸೂಚನೆ॥ ಅಂದು ವೃತ್ತಿಯ ಬಗೆಗೆ ಧೈರ್ಯವಿಲ್ಲದ
ಗಾಂಧಿ ನೊಂದು ತಾ ಮೇಮನಂಗಡಿಯವರ
ನೆರವಿಂಗೆ
ಬಂದನಾಫ್ರಿಕಕೆ ತಾ ಪುಟಕಿಟ್ಟ ಚಿನ್ನವೆನೆ
ಕಂಡನಪರಂಜಿಯಾಗಿ ॥

ಕೇಳಿದ್ಯೆ ಕೃಷ್ಣ ತಾನಂದು ಮೋಹನ ನಿಜವ
ಕೀಲ ವೃತ್ತಿಯ ಬೆಡವಿದನು ಧೈರ್ಯವಿಲ್ಲದಲೆ
ಮೇಳವಿಸಿತಂದು ಮೇಮನ್ನರಂಗಡಿಯಲನು ಕೂಲ
ಸಂದರ್ಭವವಗೆ।

ತಾಳಿದಾದರದಿಂದೆ ದಾವೆಯೊಂದಕೆ ನೀವ
ಕೀಲರಿಗೆ ನೆರವಾಗು ಯೆಂದು ಕರೆಯಲ್ಕವರು
ಶೀಲವಂತರು ಸೇಠ ರಬ್ದುಲ್ಲ ಝಾವೇರಿ ಸಂತಸದಿ
ಸಿದ್ಧನಾದಂ ॥1॥

ಅವರೆಂದರಾಗ ನಿನಗಧಿಕ ಕಾರಿಯ ವಿಲ್ಲ
ಸವನಿಪುದು ನಿನಗೆ ತಾನನು ಕೂಲವಿದರಿಂದೆ
ಹವಣಿಸುವೆ ನಾ ವಸತಿ ಸೌಕರ್ಯವೆಲ್ಲವನು
ಬಯವಿಲ್ಲವಯ್ಯ ನಿನಗೆ।
ಸವಡಿರಲ್ಕಂಗಡಿಯ ಪತ್ರಗಳನಣಿಗೊಳಿಸು
ಶಿವಮಕ್ಕೆ ನಿನಗಾಂಗ್ಲ ಮಿತ್ರ ಪರಿಚಯವಹುದು
ದಿವಸವೆಷ್ಟಿರಬೇಕು? ವರುಷ ಸಂಬಳವೆಷ್ಟು ನೂರೈದು
ಪೌಂಡೆಂದರು ॥2॥

ಪೊರಮಟ್ಟಿನಾ ಪುತಲಿಯಣುಗ ತಾ ಸಂತಸದೆ
ಸರಿಯಿದುವೆ ತನಗೆ ನಲ್ ಚಿಂತಿಸುತೆ ಮನದಲ್ಲಿ
ನೆರವಾಗಲಣ್ಣನಿಗೆ ನೂರೈದು ಪೌಂಡುಗಳ ಕಳುಹಿಸುವ
ಸಂಭ್ರಮದೊಳು।
ನಿರುತ ಕೋಟಲೆಗಳಿಂದಭಿಮಾನವಂ ತೊರೆದು
ಬರಿಗೈಯೊಳೋಲಾಡಿ ಬಾಳ್ವೆಗೈವುದು ಬೇಡ ।
ಚರಿತಾರ್ಥವೇನಿಹುದು ಭಾರತವ ತಾ ಬಿಟ್ಟು
ದೂರದಲ್ಲಿಹುದೆ ಲೇಸು ॥3॥

ಎನುತ ಪೊರಮಡೆ ಮೊದಲಿನಂತೆ ಗಡಿಬಿಡಿಯಿಲ್ಲ
ಮನಕೆ ದುಗುಡವದಿಲ್ಲವಾದರೂ ಮೋಹನಂ
ಮನಸಿಜನ ಪೆಟ್ಟಿನಿಂ ನೊಂದನಾ ಕಸ್ತೂರಿನಾಥ ತಾ
ವಿರಹಕಾಗಿ ।
ವನಿತೆಯನು ತಿದ್ದಲೆಳಸಿರ್ದ ಪುತಲೀ ಸುತಂ
ಘನವೆತ್ತ ದಿವಸದೊಳು ಬಂದಿತೀ ವಿರಹವೆಂ-
ದೆನುತೆ ಚಡಪಡಿಸಿ ದನುಲಲನೆಯಲಿ ಲಾಲಸೆಯು ಬಿಡದೆ
ತಾ ಮೋಹದಿಂದೆ ॥4॥

ಪೋಗದಿರೆ ಸರಿಯಲ್ಲ ಪೊರಮಡಲು ಮನಮಿಲ್ಲ
ವೇ ಗೈವೆನೆಂದು ತಾ ಕರ್ಮಚಂದಾತ್ಮಜಂ
ತೂಗು ಮನದಲಿ ಚಣಂತಾ ನಿರ್ಧುಕಾಥಿಯಾ
ವಾಡದಲ್ಲಿರಲೊಲ್ಲದೆ

ಬೇಗ ಭಾರತವನ್ನು ಬಿಟ್ಟು ತೆರಳುವ ಭರದೊ
ಳಾಗ ತನ್ನರಸಿಯನು ಸಾಂತ್ವನಂ ಗೊಳಿಸುತ್ತೆ
ಬೇಗಮೇ ಬರ್ಪೆನಾ ಚಿನ್ನ ಚಿಂತಿಸಬೇಡ ವಿರಹವನು
ಸಹಿಸೆಂದನು ||5||

ತೆರಳಿ ಮುಂಬಾಪುರಿಗೆ ವರ್ತಕನ ಜನದೊಡನೆ
ತರ ಹೇಳಿದೊಡೆ ಮೊದಲ ತರಗತಿಯ ಚೀಟಿಯನು
ದೊರೆಯದಿರೆ ಬಂದು ತಾನರುಹಿದನು ವಿನಯದಲಿ
ಬ್ಯಾರಿಸ್ಟರೊಡನೆ ಹದನ
ಕರುಣಿಸಿರಿ ಮೂರನೆಯ ತರಗತಿಯು ದೊರೆಯುವುದು
ನಿರುತ ಭೋಜನ ಸಿಗುವುದುತ್ತಮವೆ ತಾನೆನ
ಲ್ಕರರೆ ತೆರಳುವುದೆಂತು ಕುಂದಲ್ತೆ ಘನತೆಗಿದು ತಾನೆ
ನೋಡುವೆನೆನ್ನುತೆ ||6||

ಮುಖ್ಯಾಧಿಕಾರಿಯನು ಕಂಡು ತಾ ಕೇಳಲ್ಕೆ
ಲಭ್ಯವಿಲ್ಲಿಂದಿನಲಿ ತಳವಿಲ್ಲವೆನ್ನುತಲಿ ।
ಸಭ್ಯನೀತನ ನೋಡುತಾ ಪಾದ ಮಸ್ತಕಂ ನುಡಿದನವ
ಮನವು ಕರಗೆ।
ಶಕ್ಯವಲೆ ನೀವೆನ್ನ ಕೊಠಡಿಯಲಿ ವಾಸಿಸಲು
ಹೃದ್ಯವೆನೆ ಕೊಡುವೆ ನಾ ಸ್ಥಳವ ನಿಮಗೆಂದೆನಲು
ಪಥ್ಯವೆನು ತೊಪ್ಪಿ ತಾನುತ್ಸಾಹದಿಂದಂದು ಹತ್ತಿದನು
ಜಹಜ ಬೇಗ ||7||

ಚದುರನವ ಮೋಹನನ ಸಖ್ಯವನು ಬೆಳೆಸಿದನು
ಚದುರಂಗದಾಟದಲಿ ಹುಚ್ಚು ಮೀರುತಲಿರಲು

ಮುದದಿ ನಡೆಗಳ ರಾಜ ಮಂತ್ರಿಗಜ ರಥ
ತುರಗಪತ್ತಿಗಳ ಪೇಳುತಾಗ।
ವಿಧಿಯ ನೆಲ್ಲವನರುಹಿ ಗುರುವಾದ ನಾಟದಲಿ
ಸದುವರಿಯದಲೆ ಮತ್ತೆ ಮತ್ತೆ ಸೋಲಲು ಗಾಂಧಿ
ಯದುವೆ ಚತುರತೆ ತನಗೆ ತಾನುಳಿದುದೆನ್ನುತಲಿ ಹಿಗ್ಗಿದನು
ಮುಗ್ಧನಾಗಿ ||8||

ಇಂತು ಮೋಜಿನೊಳಂದು ಕಾಲವದು ಕಳೆಯುತಿರೆ ।
ಚಿಂತೆಯಿಲ್ಲದೆ ಲಾಮು-ಮೊಂಬಾಸುಗಳ ದಾಟಿ
ನಿಂತರಾ ಜಾಂಜಿ ಬಾರನು ತಲುಪಿ ವಿಶ್ರಾಂತಿಗೆಂದೆಂಟು
ದಿನಗಳಲ್ಲಿ।

ಸಂತಸದಿ ಕರೆಯಲಾ ಮುಖ್ಯಾಧಿಕಾರಿಯವ
ನಂತರಂಗವ ಕಾಣದಿರೆ ಮೋಹನಂ ಹರುಷ
ದಿಂ ತಮ್ಮ ಜೊತೆಗೋರ್ವನಾಂಗ್ಲ ಮಿತ್ರನು ಬರಲ್
ತೆರಳಿದರು ಮೂವರಾಗ ||9||

ಕಂಡು ಮೂವರನಿವರ ತಾ ಭುಜಂಗನದೋರ್ವ
ದಿಂಡೆಯರ ದಲ್ಲಾಳಿ ಭಂಡತನದಾಟದಲಿ
ಗಂಡುಗಳ ದೊಡ್ಡಿಯೆನೆ ನಾಣಿಲಿಗಳಾ ನೀಗ್ರೊ
ಪೆಣ್ಗಳಾಲಯಕೆ ಮುದದಿ।
ಕೊಂಡೊಯ್ದು ಮೂರು ಕೊಠಡಿಗಳಲ್ಲಿ ಬಿಡಲಾಗ
ಮಿಂಡೆಯೋರ್ವಳು ಬಂದು ಮುಂಡಾಡಲೆಳಸಿದೊಡೆ

ಕಂಡು ಸೋದರಿಯೆಂಬ ಭಾವದಲಿ ತಲೆಬಾಗಿ ನಿಂದನಾ
ಪುತಲಿಯಣುಗಂ ||10||

ನಿಂದೆದೆಯ ಮುಂಚಾಚು ತೆದೆ ಬಾವನಲುಗಿಸುತೆ
ಮುಂದಲೆಯ ನೇವರಿಸಿ ಕುಡಿಗಣ್ಣನಮುಕಿದಳು
ಮಂದಹಾಸವ ಚೆಲ್ಲಿ ಚೆಲ್ಲಾಟವಾಡಿದಳು ಬಗೆಬಗೆಯ
ಭಾವದಿಂದೆ।
ಕುಂದದಿಹ ಧೈರ್ಯದಿಂ ಕರ್ಮಚಂದಾತ್ಮಜಂ
ನಿಂದಿರಲು ತಲೆತಗ್ಗಿ ತಾ ಶಿಲಾ ಮೂರ್ತಿಯೆನೆ
ಕಂದಿತಾಕೆಯ ಮೊಗಂ ಬಂದನಿವನಾವನೋ ಗಂಡಲ್ಲವೆಂದು
ಮರುಗಿ ||11||

ಎಂತೆಂತೊ ಬೇಟೆಯಲಿ ಸಿಲುಕಿಸಿದ ಮಿಗ ಬಲೆಯ
ತಂತುವಿಂ ಜಾರಿತಾ ನೋಡುತಿರೆ ದೂರದಲೆ
ನಿಂತು ನೋಡುತಲಿರುವ ಬೇಡಿತಿಯ ವೋಡಿಯಿಂ
ತೋರ್ದಳಾ ಕೃಷ್ಣ ಲಲನೆ।
ಚಿಂತಿಸಿದ ನಾ ಗಾಂಧಿ ಯಿವಳ ಪರಿಯನು ಕಂಡ
ದೆಂತು ದಾರುಣ ವಿವಳ ಬಡತನದ ಬೇಗೆ ತಾ
ನಿಂತಿಹಳು ಮೈತೆತ್ತು ಜೀವಿಸಲು ನಿರ್ಲಜ್ಜಳಕಟಕಟ
ಕಷ್ಟವೆನುತೇ ||12||

ಹೊರಬಂದು ಜಾನಿಸಿದ ದೇವನಂ ರಾಮನಂ
ಕರುಣಿಸಿದನಂ ತನಗೆ ಧೈರ್ಯಮಂ ಶಕ್ತಿಯಂ

ಪರಮಾತ್ಮ ಕಾಯದಿರೆ ಸಿಲುಕುವನು ಮನುಜತಾ
ನಡಿಗಡಿಗೆ ಕಷ್ಟಗಳಲೀ।
ಇರಲು ಬಾಡಿಗೆಗೊಂದು ಮನೆಯ ಪಡೆ ದೂರನ್ನು
ತಿರುಗಿದನು ಫಲಭರಿತ ವೃಕ್ಷಗಳ ನೋಡುತ್ತೆ
ಹರುಷದಿಂ ಗಗನಮಂ ಚುಂಬಿಸುವ ತರುಗಳನು ವಾರವದು
ದಿವಸವೆನಲು ॥13॥

ಪೊರಮಡುತಲಲ್ಲಿಂದ ತಲುಪಿದರು ನಾಟಾಲ್
ಡರಬನೆಂಬುದವಲ್ಲಿ ರೇವು ಪಟ್ಟಣ ಪಿಹುದು
ಕರೆದೊಯ್ಯೆ ಬಂದರಲ್ಲಿಗೆ ಸೇಠರಬ್ದುಲ್ಲರನುಜರಿವ ತಿಳಿಸೆ
ತಾವು ।

ಪರಿಚಯದ ಜನವವರ ಘನತೆಯನು ಮೆರೆಯುವರು
ಗರುವದಿಂ ನೋಡುವರು ಭಾರತದ ಜನಗಳನು
ನೆರೆದೆಲ್ಲ ಜನತನ್ನ ಕೌತುಕದಿ ನೋಡುತಿರೆ ನೊಂದ ಮೋಹನ
ಮನದಲಿ ॥14॥

ಅವರ ಸಹಭವನಿತ್ತ ಪತ್ರಗಳನೊಪ್ಪಿ ಸು
ತ್ತವಲೋಕಿಸುತೆ ಮನದಿ ವಿಸ್ಮಯವ ತಾಳ್ದರಲೆ
ಯಿವನ ಕಳುಹಿದನೇಕೆ? ಪೂಜೆಗೆಂದಾನೆಯನು ಸಾಕೆಂದು
ಕಳುಹಿದಂತೆ।
ಸುವಿಧಾನದಿಂದಿವನ ಪರಿಕಿಸದೆ ಕಳುಹುವುದೆ
ವ್ಯವಹಾರಕಲ್ಲದಿರೆ ಕಾರ್ಯವೇನಿಹುದಿಲ್ಲಿ ?

ಹವಣೇನು ಕಳುಪಿದೊಡೆ ಭೇದದೊಳು ಸಿಲುಕನೆಂದೆನುತೆ
ಸಂಶಯಗೊಂಡರು ||15||

ಬರಬರುತೆ ಪರಿಚಯವು ಬೆಳೆಯುತಿರಲಂದೊಮ್ಮೆ
ಕರೆದೊಯ್ದು ನ್ಯಾಯವಾದಿಗಳೊಡನೆ ಕುಳ್ಳಿರಿಸೆ
ನಿರುಕಿಸುತೆ ನ್ಯಾಯಾಧಿ ಪತಿಯು ಮೋಹನನೊಡನೆ
ಮುಂಡಾಸ ತೆಗೆಯೆನ್ನಲು।
ಡರಬಾನ ನೀತಿಯಿದು ಸರಿಬರದೆ ಮಾನನಿಧಿ
ಹೊರವಂಟನಲ್ಲಿಂದ ಖಂಡಿಸುತಲೀ ಪರಿಯ
ಬರೆದಿತ್ತ ಲೇಖನವ ಪ್ರಕಟಿಸಲು ಪತ್ರಿಕೆಗೆ ಫಲವು
ತಾನಿಲ್ಲವಾಯ್ತು ||16||

ಕೇಳಯ್ಯ ಮತ್ತೂರ ಭಾರತೀಯರಿಗೆಲ್ಲ
ಕೂಲಿಗಳು ಯೆಂದೆಂಬ ರೂಢನಾಮ ವದಾಯ್ತು
ಕೂಲಿ ಮಾಡುವೆವೈದು ವರ್ಷವೆಂದೊಪ್ಪಂದ ದಿಂಬರಲು
ಗಿರ್ಮಿಟಿಯರು
ಕೂಲಿಯವಧಿಯು ಮುಗಿಯೆ ವಾಣಿಜ್ಯಕಿಳಿದವನು
ಕೂಲಿ ವರ್ತಕನೆನಿಪ ದೇಶಸೂಚಕ ವದುವೆ
ಕೂಲಿ ಬ್ಯಾರಿಸ್ಟರೆಂದಾಯ್ತು ಮೋಹನನಾಮ ವೇವೇಳ್ವೆ
ಕೀಳುತನವಂ ||17||

ಕೂಲಿಗಳಿಗೆಡೆಯಿಲ್ಲ ವಾಂಗ್ಲರೊಡನಾಟದಲಿ
ಕೂಲಿಗಳ ವಸತಿ ತಾನೂರ ಹೊರಗಿರಬೇಕು

ಕೂಲಿ ಹಿಂದುವು ಧನಿಕನಾದಡೆಯು ತಾನಾಂಗ್ಲ ರೈತನೂ ದೊರೆಯೆನಿಪನು
ಕೂಲಿಗಳ ತಲೆಗವರು ತೆರಿಗೆಯನು ತೆರಬೇಕು
ಕೂಲಿಗಾರ್ರೈಲಿನಲಿ ಕೀಳುದರ್ಜೆಯ ಪಯಣ
ಕೂಲಿ ತಾ ಮುಂಡಾಸ ತೆಗೆದಿರಿಸಿ ನಿಲಬೇಕು ಕೂಲಿ ಪಶುವಾಂಗ್ಲಜನರ ||18||

ಅಲ್ಲಿ ಮೊದಲಿದ್ದವರು ನೀಗ್ರೊ ಜಾತಿಯ ಜನರು
ಕಲ್ಲಿನಂತಹ ಗಟ್ಟಿ ಮೈಯ್ಯ ಜಟ್ಟಿಗಳವರು
ಬಲ್ಲವರು ಸತ್ಯವನು ನಾಗರೀಕತೆಯಿಲ್ಲ ಬೆತ್ತಲೆಯೆ ತಿರುಗುವವರು।

ಬಿಲ್ಲು ಬಾಣಗಳಲ್ಲಿ ಭರ್ಜಿಯಲಿ ಬಲ್ಲಿದರು
ನಿಲ್ಲ ದೋಡುವರವರು ಕೆಂಪು ಜನರನು ಕಂಡು
ತಲ್ಲಣದೆ ನಡುಗುವರು ಪಿಸ್ತೂಲ ಕಂಡೊಡನೆಯದು ದೈವಶಕ್ತಿಯೆಂದು ||19||

ಕಲಿಸಿದರ್ಚೆಮ್ಮೊಗ್ರ ನಾಗರೀಕತೆಯೆಂದು
ಬರೆಯಲೋದಲು ಜೊತೆಗೆ ಸುರೆಯ ಕುಡಿತವ ಬಿಡದೆ
ತೆರಿಗೆಯನು ವಿಧಿಸಿದರು ಮಡಿಯಪಟ್ಟಲು ಗಣಿಯೊಳಾಳುಗಳು ದೊರವರೆಂತು।
ದುರದೃಷ್ಟವಿವರಿಂದೆ ಕ್ಷಯಕೆ ಬಲಿಯಾದರಲೆ

ವಿರಹದಿಂ ನಾರಿಯರ ಜಾರೆಯರ ಜಾಡ್ಯದಲಿ
ಕರಗಿದರು ಬಹುಜನರು ದೂರದಲಿ ಗಣಿಗಳಲೆ ನಾಗರೀಕತೆಯ
ಫಲದೆ ||20||

ವಲಸೆ ಹೋದರು ಡಚ್ಚರಲಿ ಕೇಪ್ ಟೌನಿನಲಿ
ನೆಲೆಸಿ ಬೇಸಾಯದಲಿ ತೊಡಗಿದರು ನೀಗ್ರೊಗಳ
ಪಳಗಿಸುತೆ ಯುಕ್ತಿಯಿಂ ಶಕ್ತಿಯಿಂ ಬೆದರಿಸುತಲಾ ಜನರ
ಜೀತದಿಂದ।
ಮಲಯ ದೇಶದ ಮುಸಲ್ಮಾನರು ಗುಲಾಮರಲೆ
ಕೆಲರು ಡಚ್ಚರ ವೀರ್ಯಜಾತರವರದೆ ಗುಣವು
ನೆಲೆಸಿದರು ಬಂದಲ್ಲಿ ವಾಣಿಜ್ಯ ಮೊದಲಾದ ವೃತ್ತಿಯಲಿ
ನಿಂದರವರು ||21||

ಬಂದರಾಂಗ್ಲರು ಡಚ್ಚರಂದದೊಳೆ ವಲಸೆಯಿಂ
ನಿಂದರಹಮಹಮಿಕೆಯೊಳಿದುರಾಗಿ ಡಚ್ಚರಿಗೆ
ತಂದರ್ರೈ ಭಾರತದ ನೆರವಿಂದೆ ಕೂಲಿಗಳ ತಾವಂದು
ದೊರೆಗಳಾಗಿ।
ಒಂದೆ ಕುಲವೀರ್ವರಿಗು ಶೀಲ ಬೆಸನಗಳೊಂದೆ
ಸಂದುದ್ಧೈ ಕಲಹತಾನಾಂಗ್ಲ ಡಚ್ಚರಿಗದುವೆ
ಸಂಧಿಸಲು ಕೊಬ್ಬಿರುವ ಗೂಳಿಗಳು ಕಾಲ್ಕೆರದು ನುಗ್ಗಿ
ಹೋರಾಡುವಂತೆ ||22||

ಬೋಯರೆಂದೆನ್ನುವರು ಪೋಲೆಂಡ ವೀರರನು
ತಾಯಿನುಡಿಯೇ ಜೀವ ಸರಳ ಜೀವಿಗಳವರು
ಗಾಯಕಂಜುವರಲ್ಲ ಧೀರಯೋಧರು ಧರ್ಮಶೀಲರಾ ಬೋಯರುಗಳು
ಸ್ತ್ರೀಯರಂಜರು ತಮಗೆ ವೈಧವ್ಯ ಬಹುದೆಂದು
ಧೈರ್ಯದಿಂ ಪುರುಷರನು ಪ್ರೋತ್ಸಾಹಗೊಳಿಸುತ್ತೆ
ಸಾಯಲಂಜದೆ ತಮ್ಮ ಸ್ವಾತಂತ್ರ್ಯಕೋಸುಗವೆ ಬಹಳ ಕಷ್ಟವನಾಂತರು ||23||

ಪರಿಪರಿಯ ಕಷ್ಟಗಳ ಕೊಟ್ಟ ನಾ ಕಿಚನರನು
ಸೆರೆಯೊಳಿಟ್ಟನು ಮಹಿಳೆಯರನ್ನೆಲ್ಲ ಹಿಂಸಿಸುತ
ಉರಿಬಿಸಿಲಿನಲಿ ನಿಲಿಸಿ ಚಳಿಯೊಳೊರಗಿಸಿ ಮತ್ತೆ ಹಸಿವೆಯಿಂ ಬಳಲಿಸಿದನು।
ಸುರೆಯ ಕುಡಿದುನ್ಮತ್ತರಹ ಯೋಧ ಪಶುಗಳನು
ಕರೆದಿವರ ಕೆಡಿಸಿರೈ ಕಾಮಕೇಳಿಯಲೆಂದು
ಮರುಕವಿಲ್ಲದೆ ನೀಚಕಿಚನರನು ಕಳುಪಿದೊಡೆ ಮಹಿಳೆಯರು ಮಣಿಯಲಿಲ್ಲ ||24||

ಇಂತು ಪರಿಪರಿಯ ಕೋಟಲೆಗಳನು ಸಮಮಾಂತ
ದೆಂತು ಮಣಿಯದಿರಲ್ಕೆ ಬೆತೆಗೊಂಡು ಕೀಚಕಂ
ಚಿಂತಿಸುತೆ ಸತ್ಯಮೇ ಬಲಮೆಂದು ಮನದಲ್ಲೆ ತಗ್ಗಿದನು ಗರ್ವವಳಿದು।

ಅಂತಕನೆ ಮರುಗಿದನು ಸತ್ಯವಾನನ ಬಗೆ ಗ
ದೆಂತು ಟೋ ಮಹಿಮೆ ತಾ ಸತ್ಯದೈವದೊಳಮಮ
ಕಂತುಪಿತ ಕರುಣಿಸಲ್ಕಂದು ಬೀಜಾವಾಪವಾಯ್ತು
ಸತ್ಯಾಗ್ರಹಕದೆ ||25||

ಕೊನೆಯೊಳಾ ಬೋಯರರರು ಪಡೆದರ್ರೈ ಸ್ವಾರಾಜ್ಯ
ವನು ತಾವು ಪಟ್ಟಪಾಡನು ಮರೆತರಾಕ್ಷಣವೇ
ಮನ ಬಂದ ರೀತಿಯಲಿ ಶಾಸನವ ಮಾಡುತ್ತೆ ಕಾಡಿದರು
ಕೂಲಿಗಳನು।
ಮನೆಯ ಬಿಟ್ಟರೆ ಚೀಟಿ ಮದುವೆಯಾದರೆ ಮುದ್ರೆ
ತನ್ನ ತಲೆಗೂ ದಂಡ ವಾಣಿಜ್ಯದಲಿ ಪಿಂಡ
ಘನತೆಯಿಲ್ಲದ ಷಂಡ ಭಾರತೀಯರ ತಂಡವೂರಾಚೆ
ಯಿಹುದೆ ಚೆಂದ ||26||

ಇಂತು ಕೂಲಿಗಳೆನಿಸಿ ಬಿಳಿಜನರ ಕಿರುಕುಳವ
ನಾಂತು ಬಲುಬಳಲುತಿರೆ ಭಾರತದ ಜನವೆಲ್ಲ
ಚಿಂತಿಸುತಲಿರ್ದನಾ ದಯೆಯೊಡಲ ಮೋಹನನು
ಪರಿಹರಿಪುದೆಂತೆನು।
ತಂತಿರಲ್ಕಂದು ಸೇಠರಿಗೆ ಬಂದಿಹಪತ್ರ
ಮಂತೋರಿ ನೀ ಪ್ರಿಟೋರಿಯಕೆ ಹೋಗುವ ಬಗೆಯೊ
ಳಂತರಂಗವ ತಿಳುಹೆನಲ್ ವಿವರವೆಲ್ಲದನು ತಿಳಿಪೆ
ಪೇಳುವೆನೆಂದನು ।27||

ಕರಣಿಕರ ಕರೆದೆಂದ ರಾ ಸೇಠರೀತನಿಗೆ
ನಿರವಿಸೆಲ್ಲವನೆಂದು ಗಾಂಧಿ ಗೋನಾಮ ದಿಂ
ಕಲಿಸಿದನು ತಾನಾಯ ಬಿಯಗಳನು ಪೀ - ನೋಟು
ಮೈಸಾಲ ಪತ್ರವೆಂದು
ಹೊರಡಲನುವಾಗಲಂದಾ ಕಬಾ ಸಂಜಾತ
ನಿರುವೆ ನೀನೆಲ್ಲಿಯೆನಲೆಲ್ಲಿ ಪೇಳಿದರಲ್ಲಿ
ಪರರ ದಾಳಿಗೆ ಸಿಗದೆ ಜೋಕೆಯಿಂದಿರಬೇಕು ಚಿಂತೆಯಂ
ಬಿಡಿರೆಂದನು ||28||

ನಂಟರಲ್ಲವೆ ನಿಮಗೆ ತಯ್ಯಬಜಿ ಸೇಠರದೆ
ತಂಟೆಯಿಲ್ಲದೆ ನಾನು ಸಂಧಾನ ಕೆತ್ನಿಸುವೆ
ನಂಟು ಗಂಟುಳಿಯುವುದದೀರ್ವರಿಗು ಯೆಂದೆನಲ್ಕಬ್ದುಲ್ಲ
ಸೇಠರಾಗ।
ಕಂಟಣೆಯದೆನಗಿಲ್ಲ ನಂಟು ತಾನುಳಿಯುವೊಡೆ
ಗಂಟು ಹಾಕುವ ಮೊದಲು ವಂಚನೆಗೆ ಸಿಗಬೇಡ
ವಂಟರಿಗೆ ತಾನಹನು ಕಪಿಮುಷ್ಟಿಯವ ಸೇಠ
ಜೋಕೆಯಿಂದಿರುಯೆಂದರು ||29||

ಪೊರವಂಟನಾ ದಿಟದ ಗಂಡೆದೆಯ ಗಾಂಧಿ ತಾ
ನರುಮೆಯಿಂ ಮೊದಲನೆಯ ವರ್ಗದಲಿ ಚೀಟಿಯನು
ತರಿಸಿರಲ್ ಸೇಠರಾ ಹಾಸಿಗೆಯ ನೊದಗಿಸುವ ಚೀಟಿ
ತನಗೇಕೆಂದನು।

ಹೊರಟ ರೈಲದು ರಾತ್ರಿಯೊಂಬತ್ತು ಘಂಟೆಯಲಿ
ತಲುಪೆ ಮಾರಿಟ್ಸ್‌ಬರ್ಗನಲ್ಲೋರ್ವ ನೈ ತಂದು
ತರಲೆ ಶಯ್ಯೆಯನೆನಲು ನನ್ನ ಬಳಿಯಿಹುದಯ್ಯ
ಬೇಡವೆಂದನು ಪುತಲಿಜಂ ||30||

ಅಂದಿನಾ ಭಂಗವನು ಶಂಕರಾನುಜ ಕೇಳು
ಬಂದನೋರ್ವನು ಬಿಳಿಯ ದುರುಗುಟ್ಟಿ ನೋಡಿಕರೆ
ತಂದನಧಿಕಾರಿಗಳ ಕೆಳಗಿಳಿದು ನೀಹೋಗು ಕೊನೆಯ
ಗಾಡಿಗೆಯೆಂದರು।
ತಂದಿರುವೆ ಮೊದಲನೆಯ ತರಗತಿಗೆ ಚೀಟಿಯನು
ಕುಂದಿಲ್ಲ ನೀ ಹೋಗು ಪೋಗಲಾರೆನು ನಾನು
ಚಂದದಿಂದಿಳಿಸುವರು ಪೋಲೀಸರೈತಂದು ನೆವವೇನು?
ಕರಿಯ ನೀನು ||31||

ಎಳೆದು ಹೊರದೂಡಿದನು ಪೋಲೀಸನೈ ತಂದು
ಕೆಳಗೆ ಹಾಕಿದನಿವನ ಸಾಮಾನುಗಳನೆಲ್ಲ
ಬಳಿಕ ಬೇರೆಯ ಗಾಡಿಯಲಿ ಕೂರಲೊಪ್ಪದಿರೆ ಹೊರಟಿತಾ
ರೈಲು ತಾನು।
ಒಳಗಿಡಲು ಸಾಮಾನುಗಳನೆಲ್ಲ ನೋಡುತಲಿ
ಚಳಿಯಲಾ ರಾತ್ರಿಯಲಿ ಹೊದಿಕೆಯಿಲ್ಲದೆ ನಡುಗಿ
ಬೆಳಗಾಗುವನ್ನೆಗಂ ಚಿಂತಿಸಿದನಾ ಪುತಲಿಯಣುಗ ತನ್ನಯ
ಮನದಲಿ ||32||

ಸಂದ ಬವಣೆಯನೆಲ್ಲ ಮುಖ್ಯಾಧಿಕಾರಿಗಳಿ
ಗಂದು ತಿಳುಹುತೆ ಕೊಟ್ಟ ತಂತಿಯನು ಸೇಠರಿಗು
ನೊಂದು ಸೇಠರು ಕಂಡು ಮುಖ್ಯಾಧಿಕಾರಿಯನು ತಿಳುಹಲದೆ
ಸರಿಯೆನುತಲಿ।
ಮುಂದೆ ಪಯಣವ ಮಾಡಲನುಕೂಲ ಪಡಿಸವಗೆ
ಯೆಂದು ತಿಳುಹುವೆ ನಾನು ನಿಲ್ದಾಣ ದೊಡೆಯನಿಗೆ
ಯೆಂದೆನಲು ಸಂತಸದಿ ತಂತಿಯನು ಕಳುಹಿದರು
ನಿಜಮಿತ್ರವರ್ಗಕೆಲ್ಲ ॥33॥

ಬರುತಿಹರು ಭಾರತದ ನ್ಯಾಯವಾದಿಗಳಿವರು
ಹೊರಟಿಹರು ನಮ್ಮ ಕಾರ್ಯಕೆ ನೆರವು ನೀಡಲ್ಕೆ
ನಿರುಕಿಸುವುದಿವರ ಯೋಗಕ್ಷೇಮವೆಲ್ಲವನು ದಾರಿಯಲಿ
ನೀವು ಯೆಂದು।
ಹರುಷದಿಂ ಮಿತ್ರ ರೈ ತಂದು ನಿಲ್ದಾಣದಲಿ
ಕರುಣೆಯಿಂ ಬವಣೆಯನು ಕೇಳುತಲಿ ತಾವವನ
ಪರಿಪರಿಯೊಳುಪಚರಿಸಿ ಸಾಂತ್ವನಂ ಗೊಳಿಸಿದರು ತಮ್ಮ
ಕಷ್ಟವ ಬಣ್ಣಿಸಿ ॥34॥

ತಿರುಗಿ ನಾ ಭಾರತಕೆ ಪೋಗಲೇ? ಹೇಡಿತನ
ವಿರುವುದೇ ಬವಣೆಯಿದು ಪರಿಹಾರ ವೇನಿದಕೆ?
ಬರಲಿಹುದೊ ಮುಂದೇನು? ನಾ ಪ್ರಿಟೋರಿಯವನ್ನು ತಲುಪುವೆನೆ
ರಾಮ ರಾಮ।

ಬರಿದೆ ನಾನಾಫ್ರಿಕಕೆ ಬಂದೆನೇ ಜನನಗದಿ
ಹರೆಯೆಂದು ಧೈರ್ಯನಿಧಿ ನಿಶ್ಚಯಿಸಿದನು ತಾನು
ಬರಲಿ ಕಷ್ಟಗಳೆಲ್ಲ ಸಹಿಸುವೆನು ಸಾಧಿಸುವೆ ಬಂದ
ಕಾರಿಯವನೆಂದು ||35||

ಸಂಜೆಯಾ ರೈಲಿನಲಿ ಹೊರಟನಾ ಛಲದಂಕ
ನಂಜದಲೆ ಹಾಸಿಗೆಯ ಚೀಟಿಯನು ಪಡೆದು ತಾ
ಮುಂಜಾನೆ ತಲುಪಿದನು ಚಾರ್ಲ್ಸ್ ಟೌನನು ಬಳಿಕ
ರೈಲಿಲ್ಲದಿರಲು ಮುಂದೆ।
ಅಂಜಸದ ಚೀಟಿಯಿರೆ ಕುದುರೆ ಗಾಡಿಗೆ ತಾನು
ಹಿಂಜರಿಯದಲೆ ಹೊರಟು ಜೋಹಾನ್ಸ ಬರ್ಗಿಗಾ
ನಂಜಿಡಿದ ಬಿಳಿಜನರ ಜಿಂಜಡವ ಭಂಜಿಸಲು
ಭಜಿಸಿದನು ರಾಮನನ್ನು ||36||

ದಾರಿಯಲೆ ದಿನವೊಂದು ಕಳುವಲ್ಕೆ ಚೀಟಿಯದು
ಹಾರಿಹೋಯಿತು ಯೆನಲ್ ನ್ಯಾಯಮಂ ಕೋರಿದಡೆ
ಕಾರಣವ ಕೇಳನವ ಬಿಳಿಜನರ ಜೊತೆ ಕೂಲಿಯನು
ಕೂರಲೀಯೆನೆಂದ।
ಕೂರು ನೀ ಗಾಡಿಯನು ಹೊಡೆವವನ ಕೆಲದೊಳಗೆ
ಮೀರಿದರೆ ಗಾಡಿಯದು ಹೊರಡುವುದು ಬೇರೇನು
ದಾರಿಕಾಣದೆ ಪುತಲಿ ಜಾತನವ ಮಾನವನು ಸಹಿ
ಸಿದನು ಕುಳಿತನಲ್ಲೇ ||37||

ಮೂರು ಗಂಟೆಗೆ ಗಾಡಿ ಫರ್ಡೆ ಕೋಫನು ತಲುಪೆ
ಕಾಲಿಡುವ ಹಲಗೆಯಲಿ ಸಾಮಿ ನೀ ಕೂರೆನುತೆ
ಕೂರ ಬಯಸಿದನವನ ಜಾಗದಲಿ ಚಿಮ್ರೊಗ್ರಂ ಸಿಗರೇಟ
ಸೇದಲೆಂದು।
ಸೈರಿಸಿದೆ ಮೊದಲಿಲ್ಲಿ ಕೂರಲವ ಮಾನವನು
ಬೇರೆಡೆಯೊಳಿರೆನೊಳಗೆ ಕೂರುವೆನು ಸೈಗುಡಲು
ಕಾರಣೆಯದೇಕೆನಲ್ಕೇರಿ ಬಂದೇರಿಸಿದ ಪಟಪಟನೆ
ಕೆನ್ನೆಗಳಿಗೆ ॥38॥

ಕೆಳಕೆ ತಳ್ಳಲ್ಕೆಳಸೆ ಧೈರ್ಯ ತಾಳುತೆ ಗಾಂಧಿ
ಬಿಳಿಯ ಕಂಬಿಯ ದೃಢದಿ ಹಿಡಿದು ಕುಳಿತನು ಹಠದಿ
ಬಿಡೆನು ಮುರಿದರು ಮೂಳೆ ಜೀವವಳಿದರು ಬಿಡೆನು ಯೆಂದು
ತಾ ಗಟ್ಟಿಮನದಿ।
ಹಳಿದನವ ಹೊಡೆದನವ ಗದರಿದನು ಗುದ್ದಿದನು
ತಿಳಿದ ಬೈಗುಳ ಬಯ್ತಿಡದೆ ಬೈದು ಮುಗಿಸಿದನು
ಕಳನನೊಳಗಿದ್ದ ಜಿನತಡೆಯೆ ತಾ ಕಳೆಗೆಟ್ಟು ಕುಳಿತ
ನಿನ್ನೊಂದು ಬದಿಗೆ ॥39॥

ದುರುದುರನೆ ನೋಡಿದನು ಕೆಕ್ಕರಿಸಿ ಕೆಡೆ ನುಡಿದ
ನುರಿದುರಿದು ಬೀಳ್ದನಾ ಮುಕ್ಕ ಟೆಂಟಣಿಸಿದಂ
ಬೆರಳಲೇಡಿಸಿ ನುಡಿದ ಸ್ಟಾಂಡರ್ಟನದು ಬರಲಿ ಮಾಡುವೆನು
ನೋಡುಯೆಂದು।

ಥರಥರ ನಡುಗಿ ಗಾಂಧಿ ಬೇಡಿದಂ ದೇವನಂ
ಪರಿಹರಿಸು ಕಷ್ಟಮಂ ರಾಮ ಸೀತಾ ರಾಮ
ಕರುಣಿಸೌ ಧೈರ್ಯಮಂ ಜೀವದಿಂ ದೂರನ್ನು
ಸೇರಿಸೆಂದೆನುತೆ ಮನದೊಳ್ ||40||

ಸೇರಿತಾ ರಾತ್ರಿಯಲಿ ಗಾಂಡಿ ಸ್ಟಾಂಡರ್ಟನನು
ಭಾರತೀಯರು ಕೆಲರು ಕರೆದೊಯ್ಯೆ ಬಂದಿರಲು
ಹಾರಿದನು ಬಗ್ಗಮಂ ಕಂಡ ತುರು ಹಿಂಡು ಬರೆ
ಹರುಷದಿಂ ಹಾರುವಂತೆ।
ತೇರೊಳಾ ಸಾಹೇಬರಂಗಡಿಯ ಸೇರಿದನು
ತೇರೈಸಿ ಜನ ಬಂದು ನುಡಿಸೆ ಪೇಳಿದನಾಗ
ದಾರುಣದ ಬವಣೆಯನು ಮರುಗಿದರು ತಮಗೆ ಪಾಡಿದುವೆ
ಕಟ್ಟಿಟ್ಟುದೆಂದು ||41||

ನಾಳೆ ಗಾಡಿಯೊಳೆಂತು ಪಯಣವನು ಬೆಳೆಸುವುದು
ಕೂಳನವ ನೇಗೈವನೋ ಯೆನುತೆ ವಿಷಯವನು
ತಿಳುಹಿ ಮೇಲಧಿಕಾರಿಗೊಂದು ಪತ್ರವ ಬರೆದು ಕಳುಹಿ
ದನು ನ್ಯಾಯಕಾಗಿ।
ನಾಳೆ ಗಾಡಿಯು ಬೇರೆ ಗಾಡಿ ಹೊಡೆವವ ಬೇರೆ
ಕೀಳುತನ ತೋರಿದವ ನಾಳೆ ಬರುವವನಿಲ್ಲ
ನಾಳೆ ನೀ ನೊಳಗಡೆಯೆ ಕೂರಲೇರ್ಪಡಿಸುವೆನು
ಯೆಂದುತ್ತರಿಸಿದನವನು ||42||

ಮರುದಿನವೆ ಸುಖದಿಂದ ಜೋಹಾನ್ಸ ಬರ್ಗತಾ
ತಲುಪಿದನು ಕರೆದೊಯ್ಯೆ ಬಂದವಗೆ ಗುರುತಿಲ್ಲ
ದಿರೆ ಗಾಂಧಿ ನೋಡಿ ತಾ ಗಾಡಿಯಲಿ ನ್ಯಾಷನಲ್
ಹೋಟಲಿಗೆ ಪೋಗಲಾಗಿ।
ನಿರುಕಿಸುತಲವನ ತಾ ಹೋಟಲಿನ ಯಜಮಾನ ।
ನರುಹಿದನು ವಿನಯದಲೆ ಕೊಠಡಿ ತುಂಬಿಹುದೆಂದು
ತಿರುಗಿ ಕಮ್ರುದ್ದೀನರಂಗಿಗೆ ಗಾಡಿಯನು ಹೊಡೆಸಿದನು
ಪುತಲಿ ಕಂದ ॥43॥

ಗನಿಯವರು ತಾವಿವನ ದಾರಿ ನೋಡುತಲಿರಲು
ಬನಿಯ ವಂಶ ಲಲಾಮ ಗಾಡಿಯಿಂದವತರಿಸಿ
ದನು ಹೋಟೆಲಿನ ಕಥೆಯ ಕೇಳುತವೆ ಸೇಠಜೀ ಗಹಗಹಿ
ಸಿ ನಕ್ಕರಾಗ।
ನಿನಗೆಂತು ತೋರಿತ್ತೈ ಸ್ಥಳವಲ್ಲಿ ದೊರೆವುದೆಂ
ದೆನಲೇಕೆಸಿಗದು ? ನಿನಗರಿಯ ದಿಲ್ಲಿಯ ಪರಿಯು
ದಿನ ನಾಲ್ಕು ಕಳೆಯೆ ತಿಳಿಯುವುದೆನುತೆ ಪೇಳ್ದರಾ ಭಾರತೀಯರ
ಪಾಡನು ॥44॥

ಕೇಳಿರೈ ದೇಶವಿದು ನಿಮಗೆ ತಕ್ಕುದದಲ್ಲ
ತಾಳುವೆವು ಕೀಳ್ಮೆಯನು ಧನದಾಸೆ ಯಿಂದಾವು
ಬಾಳುವೆವು ಧನಕಾಗಿ ಮಾನವೆಂಬುದದಿಲ್ಲ ಭಾರತದ
ಜನರಿಗಿಲ್ಲಿ ।

ನಾಳೆ ಕೀಳ್ತರಗತಿಯ ಪಯಣವೇ ನಿಮಗಹುದು
ರೈಲಿನಲಿ ಮೊದಲೆರಡು ದರ್ಜೆ ಸಿಗುವುದದೆಲ್ಲಿ
ಕೂಲಿಗಳು ನಾವೆನಲ್ ನಿಮ್ಮ ಯತ್ನವು ಸಾಲದೆಂದನಾ
ಪುತಲಿ ಜಾತ ||45||

ಮರುಗಿದನು ಮನದಲ್ಲೆ ಭಾರತೀಯರ ಬಗೆಗೆ
ಕೆರಳಿದನು ಬಿಳಿಜನರ ದೌಷ್ಟ್ಯಮಂ ನೆನೆನೆನೆದು ।
ಹಲುಬಿದನು ತಮ್ಮವರ ನಿಸ್ಸಹಾಯತೆಗಾಗಿ ರಾಮನೇ
ಶರಣೆಂದನು।
ತೆರಳುವೆನು ನಾ ನಾಳೆ ಮೊದಲನೆಯ ದರ್ಜೆಯಲೆ
ದೊರೆಯದಿರೆ ಪಯಣಮಂ ಬೆಳೆಸುವೆನು ಗಾಡಿಯಲೆ
ಬರಿದೆ ಸೈರಿಸೆ ಮಾನ ಹಾನಿಯನು ಯೆನ್ನುತಲೆ
ನಿಶ್ಚಯಿಸಿದನು ಮನದೊಳು ||46||

ಬರೆದ ನೋಲೆಯ ಮೇಲಿನಧಿಕಾರಿಗಾಕ್ಷಣವೆ
ಬರುವೆ ನಾ ಬ್ಯಾರಿಸ್ಟರನು ಮೊದಲ ದರ್ಜೆಯಲೆ
ತೆರಳುವುದು ರೂಢಿ ತಾನದಕೆ ಚೀಟಿಯ ತಾವು ದೊರಕಿಸಲು
ಬೇಕು ಯೆಂದು।
ಧರಿಸಿದನು ಬಟ್ಟೆಯನು ತಾನಾಂಗ್ಲ ರೀತಿಯಲಿ
ದಿರಸು ತಾ ಯೋಗ್ಯತೆಯ ಕುರುಹು ಜಗದೊಳಗೆನುತೆ
ತೆರಳಿ ನಿಲ್ದಾಣದಲಿ ಸ್ವರ್ಣನಾಣ್ಯವನೊಂದನೆಸೆದು ಚೀಟಿಯ
ಕೇಳಲು ||47||

ಸಲುಗೆಯಿಂ ನುಡಿದನಾ ಮಾಸ್ತರನು ಮೋಹನನ
ನಿಲುವ ನೋಡುತೆ ನೀವೆ ಪತ್ರವನು ಬರೆಸಿದವ
ರಿಳುಹೆನಾ ಹಾಲೆಂಡಿನವನು ಬಲ್ಲೆನು ನಿಮ್ಮ ಮನದ
ಜಂಜಡವನೆಲ್ಲ।
ಸಲಿಸುವೆನು ಚೀಟಿಯನು ದಾರಿಯಲಿ ಜನ ನಿಮ್ಮ
ನಿಳುಹಿದರೆ ದೂರದಿರಲೆನ್ನನೆನೆ ಸಂತಸದಿ
ಸಿಲುಕಿಸೆನು ನಿಮ್ಮನೆಂದಾ ಕರ್ಮಚಂದಸುತ ಸಂಭ್ರಮದಿ
ಹೊರಟನಾಗ ॥48॥

ದಾರಿಯಲಿ ಚೀಟಿಯನು ಸರಿಗಾಣಲೆಂದೋರ್ವ
ನೇರಿ ಗಾಡಿಯ ಕಂಡು ಕೂಲಿಯನು ಕೆಂಪೇರಿ
ಮೂರನೆಯ ತರಗತಿಗೆ ಹೋಗೆಂದು ಬೆರಳಿನಲೆ
ಸೂಚಿಸಿದ ದರ್ಪದಿಂದ।
ತೋರಿದನು ಚೀಟಿಯನು ಕೆಳಗಿಳಿದು ಮಾತಾಡು
ಕಾರಣವು ಬೇಕಿಲ್ಲ ನೀ ಬಿಳಿಯ ಜನರೊಡನೆ
ತೂರಬಹುದೇ ಕೂಲಿ! ಹೋಗು ಹೋಗೆಂದೆನುತೆ
ಘರ್ಜಿಸಿದ ಧೂರ್ತನಾಗ ॥49॥

ಮಾಡುವದದೇನಿವನು ಹೊಡೆಯುವನೊ?
ಬಡಿಯುವನೊ
ಖೋಡಿಯೆನುತಿರೆ ಗಾಂಧಿ ಬಿಳಿಯ ಸಜ್ಜನನೋರ್ವ
ಬೇಡ ಬಿಡು ಕುಳಿತಿರಲಿ ಗಾಡಿಯಲಿ

ನಾವೀರ್ವರಡ್ಡಿಯೇ ನಿಲ್ಲರೆನಲು।
ಕಾಡಲೆಡೆಯಿಲ್ಲವೆನೆ, ಕೂಲಿಯವ ನೊಡನೆ ನೀ
ಕೂಡ ಬಯಸಲು ತನಗೆ ಖತಿಯಿಲ್ಲವೆಂದೆನುತೆ
ಗಾಡಿಯಿಂದಿಳಿದು ತಾ ಗೋಣಗುತ್ತೆ ಕಾವಳಿದು ಕೆಂಮೊಗಂ
ಕಪ್ಪಿಟ್ಟನು ||50||

ಕಾರುಣ್ಯನಿಧಿ ರಾಮ ರಕ್ಷಿಲು ಮೋಹನನು
ಪಾರಾದೆನೆನ್ನುತ್ತೆ ತಾ ಪ್ರಿಟೋರಿಯವನ್ನು
ಸೇರಿದನು ರಾತ್ರಿಯಲಿ ಕರೆದೊಯ್ಯೆ ಸೇತರೇ ಬಂದಿಹರು
ಎಂದು ಮುದದಿ।
ಬೀರಿದನು ದಿಟ್ಟಿಯನ್ನತ್ತಿತ್ತ ಕಾಣದಿರೆ
ಬೇರೆಜನ ಪೋಗುವನ್ನೆಗಮಲ್ಲಿ ನಿಂತಿರ್ದು
ಪೋರಬಂದರ ವೀರ ಚಿಂತಿಸುತೆ ಮನದಲ್ಲೆ ಕೇಳಿದನು
ಕಾವಲವನ ||51||

ಎಲ್ಲಿ ಪೋಗುವುದೆಂದು ತಿಳಿಯೆ ನಾ ನೂರಿದನು
ಬಲ್ಲೆ ನಿಲ್ಲವೆನುತ್ತೆ ತಾ ಚೀಟಿಯನು ಕೊಟ್ಟು
ದೆಲ್ಲಿಹುದು ವಸತಿ ಗೆಡೆಗೊಡುವ ಭೋಜನ ಶಾಲೆಯದನೆನಗೆ
ತಿಳುಹಿರೆನಲು।
ಗಲ್ಲವನು ತೀಡೆ ತಾನತಿ ವಿನಯದಾಧೂರ್ತ
ನಿಲ್ಲೆ ರಾತ್ರಿಯ ಕಳೆವೆನೆಂದಿರಲು ಮೋಹನನು
ಸಲ್ಲಾಪ ಕೆಳಸಿ ತಾ ಬಂದನಲ್ಲಿಗದೋರ್ವ ನೀಗ್ರೊ
ತಾತೋರ್ಪೆನೆಂದ ||52||

ಇರಲು ಸಂಶಯ ಬೇರೆ ದಾರಿಗಾಣದೆ ಸೈಗು
ಡಲು ನೀಗ್ರೊ ಕರೆದೊಯ್ದು ಜಾನ್‌ಸ್ವನಿನ ಹೋಟೆಲಿಗೆ
ಕರೆದವನನೊಳವಾತಿನೊಳು ತಿಳುಹಲೆಲ್ಲವಂ
ನುಡಿದನವನೊಳ್ನುಡಿಯನು।
ಬರುವವರು ಬಿಳಿಜನರು ಕರಕರಿಸೆ ಕಯ್ಸೆಸರ್
ಬರುವುದಲೆ ನೀವುಣಲು ಕೊಠಡಿಯಲೆ ಸಮ್ಮತಿಯು
ದೊರೆವುದೆಲೆ ಸಂತಸದಿ ನಿಮ್ಮ ಕಷ್ಟವ ಬಲ್ಲೆನುಪಕೃತನು
ತಾನೆಂದನು ॥53॥

****

ಶ್ರೀ

॥ ದಂಡೀ ದಂಡಕಂ ॥

ದಿನವು ಪರಿಪುದ್ಯೆ ದಿವ್ಯಮಂ ನವ್ಯಮಂ
ಗಾಂಧಿ ಚಾರಿತ್ರ್ಯಮಂ ಭವ್ಯಮಂ ಪುಣ್ಯಮಂ ಭಾರತ
ಶ್ರೇಷ್ಠ ಲೀಲಾ ವಿಶೇಷಾನ್ವಿತಂ ತಾನೆನಲ್ ಸರ್ವ
ಪಾಪೌಘಮಂ ಸುಟ್ಟು ಸತ್ಯಾತ್ಮರಂ ಮಾಳ್ಪುದೀ
ಕಾವ್ಯರತ್ನಂ ಸತ್ಕಥಾ ಕಲ್ಪವೃಕ್ಷಂ ॥

ದಿನವು ನೆನೆವು ದೈ ಗಾಂಧಿ ವಂಶಾಬ್ದಿ ಸಂಜಾತ
ಶುಭ್ರಾಂಶುವಂ ಪುತ್ಥಲೀ ಗರ್ಭಸಿಂಧೂತ್ಥಶೀತಾಂಶು
ವಂ ಕರ್ಮಚಂದಾಖ್ಯ ಚಂಡಾಶು ಸಂಭೂತ ನಂ

ಧರ್ಮನಂ ಪೋರಬಂದರ್ಯಶೋ ರಾಶಿಯಂ
ದಿವ್ಯ ಸತ್ಯರ್ಷಿಯಂ ನಿತ್ಯನಂ ಸತ್ಯನಂ ಸತ್ಯಸಂಕಲ್ಪನಂ
ದೀನ ಸಂರಕ್ಷನಂ ತಾತ ಗಾಂಧೀಜಿಯಂ ದಂಡಿಯಂ
ಚಕ್ರಿಯಂ ಖಾದಿಯಂ ತೊಟ್ಟನಂ ಭಾರತಂ ದುಃಖಿ
ಸಲ್ ಶೂರ ಸತ್ಯಾಯುಧಂ ಧೈರ್ಯದಿಂ ನಿಂದು
ಪಾಶ್ಚಾತ್ಯರಂ ಗೆಲ್ದ ಸತ್ಯಾಗ್ರಹಂ ಖ್ಯಾತಿಯಂ ಪೊಂದಿರಲ್
ಕಿಂದದೇ ಸತ್ಯ ಪೋದತ್ತು ನಿಂದಿತ್ತು ತಾನಾಗ್ರಹಂ
ಕಾಲವೇ ಸರ್ವಕೂ ಕಾರಣಂ ಕಾಲಕಾಂ ಸರ್ವದಾ
ವಂದಿಪೆಂ ||

ದಿನವು ಭಜಿಪುದ್ಧೈ ಸತ್ಯ ಸಂಸಕ್ತನಂ
ತ್ಯಕ್ತ ಹಿಂಸಾತ್ಮನಂ ರಿಕ್ತರಕ್ಷೈಕ ದೀಕ್ಷಾ ವಿಲಾಸಾ
ತ್ಮನಂ ರಾಮನಾಪಾದರಕ್ತೋತ್ಪಲ ಧ್ಯಾನ ರಕ್ತಾ
ತ್ಮನಂ ಮುಕ್ತ ಪಾಪಾತ್ಮನಂ ಕರ್ಮಸಕ್ತಾತ್ಮನಂ
ದೀನದತ್ತಾತ್ಮನಂ ನಿರ್ಮಲ ಜ್ಯೋತಿಯಂ
ಮೋಹನಂ ತಾನೆನಲ್ಕಸ್ಥಿಶೇಷಾತ್ಮನಂ ನಿತ್ಯಕೀ
ರ್ತ್ಯಾತ್ಮನಂ ಪುತ್ಥಲೀ ರತ್ನಮಂ ಕರ್ಮಚಂದೀಯ
ಸೌಭಾಗ್ಯ ಸಂದೋಹಮಂ ಮೋಹನಾ ಕಾರನಂ
ಸಾಧ್ವಿ ಕಸ್ತೂರಿ ಬಾ ನಾಥನಂ ಪ್ರೀತನಂ ಸಾಧುವಂ
ಜೋಗಿಯಂ ತ್ಯಾಗಿಯಂ ತವಸಿಯಂ ಸತ್ಯಮೇ

ದೈವಮೆಂದಿರ್ದನಂ ಶಾಂತನಂ ಪಾಪಮಂ
ಶೋಧಿಸಲ್ಕನ್ನಮಂಬಿಟ್ಟನಂದಾಫ್ರಿಕಾಖಂಡ
ದೊಳ್ ಕೃಷ್ಣವರ್ಣೀಯರನ್ನೆತ್ತಿದಾಧೀರನಂ
ಭಾರತಂ ದೈನ್ಯದಿಂ ಕೂಡಿರಲ್ ಖಾದಿಯಿಂ ದೀನ

ರಿಂಗನ್ನಮಂ ಕೊಟ್ಟನಂ ದಿಟ್ಟನಂ ಬೆಳ್ಜನಂ
ದರ್ಪದಿಂ ದೌಷ್ಟ್ಯದಿಂದೆಮ್ಮನಂ ಮೆಟ್ಟುತುಂ
ಬಾಧಿಸಲ್ ಜಾತಿಯಂ ದೂಷಿಸಲ್ ಗೋಗಳಂ
ಹಿಂಸಿಸಲ್ ದೇಶಮಂ ಶೋಷಿಸಲ್ ರತ್ನಸಂದೋ
ಹಮಂ ಸಾಗಿಸಲ್ ಗುಂಡಿನಿಂ ವೀರರಂ ಚೆದುರಿಸಲ್
ಶಿಕ್ಷೆಯಿಂ ದುಗ್ರರಂದಾಗಿರಲ್ ಧೀರನೀ ಹಿಂಸೆಯಿಂ
ದೋಷಮೇ ಬರ್ಕುಮೆಂದೆಂದಿಗುಂ ಸತ್ಯಮೇ
ಸುಂದರಂ ಸತ್ಯಮೇ ದೈವಮುಂ ಸತ್ಯರೂಪಂ ಶಿವಂ
ಸತ್ಯಮೇ ಶಸ್ತ್ರ ಮೆಂದೆನ್ನುತಂ ನಿಶ್ಚಯಂ ಗೈಯ್ಯುತುಂ
ಧೈರ್ಯದಿಂ ಶೌರ್ಯದಿಂ ಶಾಂತಿಯಿಂ ನೀತಿಯಿಂ
ಸತ್ಯಮೇ ಗೆಲ್ಲು ಮೆಂದೊಪ್ಪಿ ಕಾದುತ್ತಿರಳ್ ವೀರ

ಸತ್ಯಾಯುಧಂ ಸತ್ಯಮಂ ಬಗ್ಗಿಸಲ್ಕಾಗದೇ
ಕಂಬಿಯಂ ಕಿತ್ತರಾ ಚೆಂಮೊಗರ್ ನಾಚಿ ಚಾಣಿಕ್ಯ
ತಾನೆತ್ತಲೋ ಕಾಣೆ ನಾನದ್ಭುತಂ ಶಸ್ತ್ರದಾಡಂ
ಬರಂ ತೋರದಾ ಸಂಗರಂ ಸದ್ದೆ ತಾನಿಲ್ಲದಾ
ಯುದ್ಧಮಿಂದದ್ಭುತಂ ಕೇಳ್ದೆ ನಿಲ್ಲೀ ವರಂ
ದುಷ್ಟನಿಂದೋರ್ವನಿಂ ನಂದಿತೀ ಜ್ಯೋತಿತಾ
ನಾದೊಡಂ
ಸತ್ಯದಾ ಕಾಂತಿತಾ ಕುಂದದೇ ನಿತ್ಯತಾ ರಾಜಿಸು
ತ್ತಿರ್ಪುದಾ ಸತ್ಯದಿಂ ಲೋಕಕೇ ಮಂಗಳಂ ಮಂಗಳಂ
ಮಂಗಳಂ ॥

****



1968 ಅಕ್ಟೋಬರ್ 1, ಗಾಂಧಿ ಶತಾಬ್ದಿ ಸಮಿತಿಯ ಮುಖ್ಯಸ್ಥರು (ಎಡದಿಂದ ಬಲಕ್ಕೆ)
ಶ್ರೀ ಜೆ.ಎಂ.ಟಿ. ರಾಜನ್, ಶ್ರೀ ವೀರೇಂದ್ರ ಪಾಟೀಲ್, ಶ್ರೀ ಶಂಕರೇಗೌಡರು, ಶ್ರೀ ಮತ್ತೂರು ಕೃಷ್ಣಮೂರ್ತಿ,
ಶ್ರೀ ಬೀರೂರು ಚಿದಂಬರ ಜೋಯಿಸರು ಮತ್ತು ಹೊಸಹಳ್ಳಿ ಶ್ರೀ ರಾಮಶಾಸ್ತ್ರೀ.

ಕವಿ – ಸಾಹಿತಿ ಬೀರೂರು ಶ್ರೀ ಚಿದಂಬರ ಜೋಯಿಸರು



ಸುಮಾರು ನೂರು ವರ್ಷಗಳ ಹಿಂದಿನ ಮಾತು. ಚಿಕ್ಕಮಂಗಳೂರು ಜಿಲ್ಲೆ, ಕಡೂರು ತಾಲ್ಲೂಕಿನ ಬೀರೂರಿನ ಸಮೀಪ 'ಹಿರಿಯಂಗಳ' ಎನ್ನುವ ಒಂದು ಸಣ್ಣ ಗ್ರಾಮ. ಇಲ್ಲಿ ಹಲವಾರು ಕುಟುಂಬಗಳು ನೆಲೆಸಿದ್ದವು. ಕೃಷಿಯೇ ಈ ಕುಟುಂಬಗಳ ಜೀವನಾಧಾರವಾಗಿತ್ತು. ಕಾಲಕ್ರಮೇಣ ಇವರೆಲ್ಲ ಬೀರೂರಿಗೆ ಬಂದು ನೆಲೆಸಿದರು. ಅಂತಹವರಲ್ಲಿ ದಿ॥ ವೇ ॥ ಬ್ರಂ ॥ ಶ್ರೀ ರಾಮಕೃಷ್ಣ ಜೋಯಿಸರ ಕುಟುಂಬವೂ ಒಂದು. ವೈದಿಕ ಸಂಪ್ರದಾಯಸ್ಥರಾದ ಶ್ರೀ ರಾಮಕೃಷ್ಣ ಜೋಯಿಸರು ಮತ್ತು ನಾಗಮ್ಮ ದಂಪತಿಗಳಿಗೆ ನಾಲ್ಕು ಮಕ್ಕಳು. ಇವರಲ್ಲಿ ಹಿರಿಯವರೇ ದಿ॥ ಶ್ರೀ ಬೀರೂರು ಚಿದಂಬರ ಜೋಯಿಸರು. (ಜನನ : 1.8.1914). ಮಾಧ್ಯಮಿಕ ಶಾಲೆಯ ತನಕ ಕಡೂರಿನಲ್ಲಿ ಶಿಕ್ಷಣ. ನಂತರ ಸಂಸ್ಕೃತ, ವೇದ - ವೇದಾಂತಗಳ ಅಭ್ಯಾಸದತ್ತ ಒಲವು. ಶೃಂಗೇರಿಯ ವೇ॥ ಬ್ರಂ॥ ಶ್ರೀ ಸುಂದರ ಶಾಸ್ತ್ರಿಗಳಲ್ಲಿ ಕಾವ್ಯ ಮತ್ತು ಧಾರವಾಡದ ಶ್ರೀ ವೆಂಕಟರಾಮ ಭಟ್ಟರಲ್ಲಿ ಅದ್ವೈತ ವೇದಾಂತ-ತರ್ಕಶಾಸ್ತ್ರಗಳ ಅಭ್ಯಾಸ. 1950ರಲ್ಲಿ ಸಂಸ್ಕೃತ ಸಾಹಿತ್ಯ ಪರೀಕ್ಷೆಯಲ್ಲಿ ತೇರ್ಗಡೆ. ಏತನ್ಮಧ್ಯೆ ತಮ್ಮ ತಂದೆಯವರಾದ ಶ್ರೀ ರಾಮಕೃಷ್ಣ ಜೋಯಿಸರ ಮಾರ್ಗದರ್ಶನದಲ್ಲಿ ಜ್ಯೋತಿಷ್ಯ ಶಾಸ್ತ್ರದಲ್ಲಿ ಪ್ರವೇಶ - ಅಧ್ಯಯನ. ಸಾವಿತ್ರಮ್ಮನವರ ಕೈಹಿಡಿದು ಗೃಹಸ್ಥಾಶ್ರಮ ಸ್ವೀಕಾರ.

1968ರಲ್ಲಿ ಗಾಂಧೀ ಶತಮಾನೋತ್ಸವದ ಪ್ರಯುಕ್ತ, ಕರ್ನಾಟಕ ಸರ್ಕಾರ ಮತ್ತು ಗಾಂಧೀ ಸ್ಮಾರಕ ನಿಧಿಯ ಅಪೇಕ್ಷೆಯ ಮೇರೆಗೆ ಕನ್ನಡದಲ್ಲಿ ಮೊದಲ ಬಾರಿಗೆ ಗಾಂಧೀಜಿಯ ಜೀವನ ಚರಿತ್ರೆಯನ್ನು ಕಾವ್ಯರೂಪದಲ್ಲಿ ರಚಿಸಲು ಚಿದಂಬರ ಜೋಯಿಸರು ತೊಡಗಿದರು. ಅತ್ಯಂತ ಅಲ್ಪ ಕಾಲದಲ್ಲಿ ಮಹಾತ್ಮ ಗಾಂಧೀಜಿ ಬಗ್ಗೆ ಹಲವಾರು ಆಕರ ಗ್ರಂಥಗಳನ್ನು ಓದಿ, ಅವುಗಳ ಸಾರವನ್ನು ತಮ್ಮ ಕಲ್ಪನೆಯ ಮೂಸೆಯಲ್ಲಿ ಎರಕ ಹೊಯ್ದಾಗ ಹೊರಬಂದ ಅಪರೂಪದ ಕಾವ್ಯಾಭರಣವೇ **'ಮೋಹನ ತರಂಗ'**. ಈ ಕಾವ್ಯದ ಬಿನ್ನಹ ಪದ್ಯಗಳಲ್ಲಿ ಒಂದನ್ನು ಇಲ್ಲಿ ಉಲ್ಲೇಖಿಸುವುದು ಉಚಿತವೆನಿಸುತ್ತಿದೆ. ಈ ಪದ್ಯ ಕಾವ್ಯದ ಬಗೆಗಿನ ಜೋಯಿಸರ ನಿಲುವನ್ನೂ ಸಾರಿ ಹೇಳುತ್ತದೆ.

''ಸರಳತೆಯು ಶೈಲಿಯಲಿ ಪದಗಳಲಿ ಮೈತ್ರಿಯದು ಬರೆವ ವೇಗದ ಜೊತೆಗೆ ತಿದ್ದದಿಹ ಚೆಲುವು ।
ನೆರೆದ ಜನ ಮೆಚ್ಚುವಂದದ ಬಲುಹು ಕಾವ್ಯದೊಳು ಶಾರದೆಯ ಕೃಪೆಯಲ್ತೆ ಬೇರೆಯೇನಿಹುದು ॥''